# ಐಕ್ಯರಂಗ

ವಾರಪತ್ರಿಕೆ

ಭಾರತಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 | ಸಂಚಿಕೆ 49 | ಡಿಸೆಂಬರ್ 6, 1987 | ಬೆಲೆ 1 ರೂ.




ಸಿ. ಐ. ಟಿ. ಯು ಕಾರ್ಯಕಾರಿ ಸಮಿತಿ ಸಭೆ

# ಧೈರ್ಯ ಹಾಗೂ ಶಿಸ್ತಿನಿಂದ ಕಾರ್ಮಿಕರು ಕಠಿಣ ಪರಿಸ್ಥಿತಿ ಎದುರಿಸುತ್ತಿದ್ದಾರೆ

ರಾಜೀವ್ ಗಾಂಧಿಯ ವಿರುದ್ಧ ಹೋರಾಟದಲ್ಲಿ ಎಡ ಪಕ್ಷಗಳು, ಜಾತ್ಯಾತೀತ, ವಿರೋಧ ಪಕ್ಷಗಳು ಹಾಗೂ ಸಾಮೂಹಿಕ ಸಂಘಟನೆಗಳ ನಡುವೆ ಒಂದು ಪರಸ್ಪರ ತಿಳುವಳಿಕೆ ಮೂಡಿ ಬರಬೇಕೆಂದು ಭಾರತದ ಕಾರ್ಮಿಕ ವರ್ಗ ಒತ್ತಾಯಿಸಬೇಕು ಎಂದು ಸಿ. ಐ. ಟಿ. ಯು. ಅಧ್ಯಕ್ಷ ಹಾಗೂ ಸಿ. ಪಿ. ಐ. (ಎಂ) ಪಾಲಿಟ್ ಬ್ಯೂರೋ ಸದಸ್ಯ ಕಾ. ಬಿ. ಟಿ. ರಣದಿವೆ ಕಾರ್ಮಿಕ ವರ್ಗಕ್ಕೆ ಕರೆನೀಡಿದ್ದಾರೆ. ಇಂತಹ ಒಂದು ತಿಳುವಳಿಕೆಯ ಆಧಾರದ ಮೇಲೆ ಹಾಗೂ ಕೋಮು ಶಕ್ತಿಗಳನ್ನು ದೂರ ಮಾಡುವುದರ ಮೂಲಕವಷ್ಟೇ ಜನತೆಗೆ ಪರವಾದ ;ದೇಶಕ್ಕೆ ಪರವಾದ ಒಂದು ಫಲಿತಾಂಶ ಪಡೆಯಲು ಸಾಧ್ಯ ಎಂದು ಅವರು ಕಾರ್ಮಿಕವರ್ಗವನ್ನು ಎಚ್ಚರಿಸಿದರು.

ಚಂಡೀಘಡದಲ್ಲಿ ಸಿ. ಐ. ಟಿ. ಯು. ಕಾರ್ಯಕಾರಿ ಸಮಿತಿಯ ಸಭೆಯನ್ನು ಉದ್ದೇಶಿಸಿ ಅಧ್ಯಕ್ಷ ಭಾಷಣ ಮಾಡುತ್ತಾ ಕಾಂ. ರಣದಿವೆಯವರು ಕರೆ ನೀಡಿದರು. ಕಾರ್ಯಕಾರಿ ಸಮಿತಿಯ ಸಭೆ ಡಿಸಂಬರ್ 1 ರಿಂದ 3 ರ ವರೆಗೆ ನಡೆಯಿತು.

ತಮ್ಮ ಭಾಷಣದಲ್ಲಿ ಮೊತ್ತ ಮೊದಲಿಗೆ ಕಳೆದ ಮೂರು ವರ್ಷಗಳಿಂದ ರಾಷ್ಟ್ರೀಯ ಐಕ್ಯತೆಯನ್ನು ಛಿದ್ರಗೊಳಿಸುವವರು ಮತ್ತು ಭಾರತದ ಸ್ವಾತಂತ್ರ್ಯ ಮತ್ತು ಒಗ್ಗಟ್ಟಿನ ರಕ್ಷಕರ ನಡುವೆ ಕಾಳಗದ ಕಣವಾಗಿರುವ ಪಂಜಾಬಿನಲ್ಲಿ ತಮ್ಮ ಪವಿತ್ರ ಕರ್ತವ್ಯವನ್ನು ನೇರವೇರಿಸುತ್ತಾ ಭಯೋತ್ಪಾದಕರ ಹಲ್ಲೆಗಳಿಗೆ ಬಲಿಯಾದ ಹುತಾತ್ಮರನ್ನು ಗೌರವಪೂರ್ಣವಾಗಿ ನಾವೆಲ್ಲರೂ ಸ್ಮರಿಸಿಕೊಳ್ಳಬೇಕೆಂದು ನುಡಿದ ಕಾಂ. ಬಿ.ಟಿ.ಆರ್. ಇತ್ತೀಚೆಗೆ ನಿಧನರಾದ ಸಿ. ಐ. ಟಿ. ಯು. ಕಾರ್ಯದರ್ಶಿ ಕಾಂ. ನೃಸಿಂಗ್ ಚಕ್ರವರ್ತಿಯವರು ಭಾರತದ ಟ್ರೇಡ್ ಯೂನಿಯನ್ ಚಳುವಳಿಗೆ ನೀಡಿದ ಅಪಾರ ಕೊಡಗೆಯನ್ನು ಸ್ಮರಿಸಿಕೊಳ್ಳುತ್ತಾ "ನಮ್ಮ ಆಂದೋಲನದ ಆಪಾರ ತಿಳಿವು ಶಿಸ್ತು ಹಾಗೂ ಸಮರ್ಪಣಾ ಭಾವದ ಇಂತಹ ಒಂದು ಸಂಗಮ ಕಾಣಬರುವುದು ಬಹಳ ಅಪರೂಪ" ಎಂದು ವರ್ಣಿಸಿದರು.

ಅಕ್ಟೋಬರ್ ಕ್ರಾಂತಿಯ 70 ನೇ ವಾರ್ಷಿಕೋತ್ಸವ ಸಂದರ್ಭದಲ್ಲಿ ಸೋವಿಯತ್ ಕಾರ್ಮಿಕವರ್ಗ ಹಾಗೂ ಜನತೆಗೆ ಶುಭಾಶಯ ಕೋರುತ್ತಾ "ಅತ್ತ ಬಂಡವಾಳಶಾಹಿ ಜಗತ್ತು ಕುಸಿಯುತ್ತಿರುವಾಗ ತ್ವರಿತ ಅಭಿವೃದ್ಧಿಯ 15 ವರ್ಷದ ಸೋವಿಯತ್ ಯೋಜನೆ ಸಮಾಜವಾದೀ ಪದ್ಧತಿಯ ಹಿರಿಮೆಯನ್ನು ಮತ್ತೊಮ್ಮೆ ಸ್ಪಷ್ಟಪಡಿಸಿದೆ" ಎಂದ ಅವರು ಸಿ.ಐ.ಟಿ.ಯು. ಸಂಘಗಳು ನ್ಯೂಕ್ಲಿಯರ್ ಯುದ್ಧ ತಡೆಯುವ ಸೋವಿಯತ್‌ಪ್ರಯತ್ನಗಳನ್ನು ಬಲಗೊಳಿಸಬೇಕೆಂದು ಕರೆ ನೀಡಿದರು.

ಬಾಂಗ್ಲಾದೇಶದಲ್ಲಿ ಮಿಲಿಟರಿ ಸರ್ವಾಧಿಕಾರಿಯ ವಿರುದ್ಧ ಅಲ್ಲಿನ ಕಾರ್ಮಿಕ ವರ್ಗ ಹಾಗೂ ಜನತೆಯ ಚಾರಿತ್ರಿಕ ಹೋರಾಟವನ್ನು ಬೆಂಬಲಿಸಿ ಮಿಲಿಟರಿ ಭಯೋತ್ಪಾದಕತೆಯನ್ನು ಸಿ. ಐ. ಟಿ. ಯು. ಬಲವಾಗಿ ಖಂಡಿಸುತ್ತದೆ ಎಂದು ನುಡಿದ ಬಿ. ಟಿ. ಆರ್. ನಮ್ಮ ಇನ್ನೊಂದು ನೆರೆಯ ದೇಶ ಶ್ರೀಲಂಕಾದಲ್ಲಿನ ಪರಿಸ್ಥಿತಿಯ ಬಗ್ಗೆ ತೀವ್ರ ಆತಂಕ ವ್ಯಕ್ತಪಡಿಸಿದರು. ಭಾರತ-ಶ್ರೀಲಂಕಾ ಒಪ್ಪಂದವನ್ನು ಸರಿಯಾಗಿ ಅನುಷ್ಠಾನಕ್ಕೆ ತಂದಿದ್ದರೆ ನಮ್ಮೆರಡು ಅಲಿಪ್ತ ದೇಶಗಳ ಮೈತ್ರಿಗೆ ಒಂದು ದೊಡ್ಡ ಯಶಸ್ಸು ಸಿಕ್ಕಿದಂತಾಗುತ್ತಿತ್ತು ಎಂದು ಹೇಳಿದ ಅವರು ತಮಿಳು ಉಗ್ರಗಾಮಿಗಳು ಮತ್ತು

(8ನೇ ಪುಟ ನೋಡಿ)

# ಕರ್ನಾಟಕ ಸರ್ಕಾರದ ಆರ್ಥಿಕ ದುಸ್ಥಿತಿ

**ಕ**ಕರ್ನಾಟಕ ಸರ್ಕಾರದ ಆರ್ಥಿಕ ದುಸ್ಥಿತಿಯ ಬಗ್ಗೆ ಕಾಂಗ್ರೆಸ್(ಐ) ರಾಜ್ಯನಾಯಕರೆಲ್ಲಾ ದಿನನಿತ್ಯ ಬೊಬ್ಬೆ ಹೊಡೆಯುತ್ತಿದ್ದಾರೆ. ತೀರ ಮೊದಲಿನಿಂದಲೇ ಇದ್ದ ಈ ಧ್ವನಿ ರಾಜೀವ ಗಾಂಧಿಯವರ ಸರಕಾರದ ಮೇಲೆ ಒಂದೇ ಸಮನೆ ಭ್ರಷ್ಟಾಚಾರದ ಅಪಾದನೆಗಳು ಜೋರಾಗುತ್ತಿದ್ದಂತೆ ವಿರೋಧಪಕ್ಷಗಳು ಆಡಳಿತದಲ್ಲಿರುವ ಎಲ್ಲಾ ರಾಜ್ಯಗಳಲ್ಲಿ ಅಪಪ್ರಚಾರದ ಹುಯಿಲೆಬ್ಬಿಸಲು ನೀಡಿದ ಆದೇಶದ ಪ್ರಕಾರ ರಾಜ್ಯದಲ್ಲಿಯೂ ಕಾಂಗ್ರೈನ ವಿರೋಧ ಪಕ್ಷದ ನಾಯಕರು ಸರ್ಕಾರಿ ಪ್ರತಿ ಶಾಸಕರಿಗೂ ನೀಡುವ ರಾಜ್ಯ ಸರ್ಕಾರದ ಹಾಗೂ ವಿವಿಧ ಇಲಾಖೆಗಳ ಅಡಳಿತ ವರದಿಗಳನ್ನು ಯಾವ ವರದಿಗಳು ಬಹಳ ದಿನಗಳಿಂದ ಅವರಕೊಠಡಿಗಳಲ್ಲಿ ಧೂಳು ತುಂಬಿ ಕೊಳೆಯುತ್ತಿದ್ದವೋ ಆ ವರದಿಗಳನ್ನು ತಿರುಹಾಕಲು ಆರಂಭಿಸಿದರು.

ಕೇಂದ್ರ ಸರ್ಕಾರದ ಅರ್ಥಸಚಿವ ಜನಾರ್ಧನಪೂಜಾರಿಯವರು ರಾಜ್ಯ ಕಾಂಗ್ರೈ ಅಧ್ಯಕ್ಷರಾದ ಮೇಲೇ ಈ ಧ್ವನಿ ಮತ್ತಷ್ಟು ಕರ್ಕಶವಾಯಿತು. ಇಂತಹ ಕರ್ಕಶ ಧ್ವನಿಯನ್ನು ಪ.ಬಂಗಾಳದಲ್ಲಿ, ಕೇರಳ ತ್ರಿಪುರಾಗಳಲ್ಲಿ ದಿನನಿತ್ಯ. ಕೇಳಿ, ಅದಕ್ಕೆ ಸರಿಯಾಗಿ ತಿರುಉತ್ತರಕೊಟ್ಟು ನಮ್ಮ ಪಕ್ಷಕ್ಕೆ ಅಭ್ಯಾಸವಾಗಿದೆ.

ರಾಜ್ಯ ಸರ್ಕಾರದ ಬೊಕ್ಕಸ ನಿಜವಾಗಿಯೂ ಖಾಲಿಯಾಗದೆಯೇ ಆಗಿದ್ದರೆ ಅದಕ್ಕೆ ಕಾರಣವೇನು?ಯಾರು? ಇತರ ರಾಜ್ಯ ಸರಕಾರಗಳ ಪರಿಸ್ಥಿತಿಗೆ ಹೋಲಿಸಿದರೆ ಹೇಗೆ? ಸ್ವತಃ ಕೇಂದ್ರ ಸರ್ಕಾರದ ಪರಿಸ್ಥಿತಿ ಹೇಗಿದೆ? ಇವೆಲ್ಲಾ ಅಂಶಗಳನ್ನು ಪರಿಶೀಲಿಸಿದರೆ ಮಾತ್ರ ಈ ಸಮಸ್ಯೆಯ ನಿಜವಾದ ಆಳ ಆಗಲಗಳ ಅರಿವಾಗುವುದು. ಆದರೆ ಬೇರೆ ಬೇರೆ ರಾಜ್ಯಗಳಅಂಕಿಅಂಶಗಳುಕೇಂದ್ರದ ಅಂಕಿಅಂಶಗಳು ಕೇಂದ್ರದವಿತ್ತಸಚಿವ ಪೂಜಾರಿಯವರಲ್ಲಿ ಮಾತ್ರಲಭ್ಯ ಅವರು ಅದರ ಬಗ್ಗೆ ಬಾಯಿಬಿಡುತ್ತಿಲ್ಲ.

ಇಂದು ಯಾವುದಾದರೂ ಸರ್ಕಾರ ಅತ್ಯಂತ ಹೆಚ್ಚು ಆರ್ಥಿಕ ದುಸ್ಥಿತಿಯಲ್ಲಿದ್ದರೆ ಅದು ಕೇಂದ್ರಸರ್ಕಾರ ಮಾತ್ರ. ಇಡೀ ದೇಶ ಏನೇ ದಿವಾಳಿಯ ಮಾರ್ಗ ಕೊಯ್ಯುತ್ತಿರುವ ಆರ್ಥಿಕ ನೀತಿಗಳ ಫಲವಾಗಿ ಸ್ವಾತಂತ್ರ್ಯ ನಂತರದ ಯಾವುದೇ ಕೇಂದ್ರಸರಕಾರಕ್ಕಿಂತಲೂ ಹೆಚ್ಚು ಆರ್ಥಿಕ ದುಸ್ಥಿತಿಯಲ್ಲಿರುವ ಸರ್ಕಾರ ಇದು.

ರಾಜೀವಗಾಂಧಿಯವರುಅಧಿಕಾರಕ್ಕೆ ಬಂದಾಗಿನಿಂದ ಕೇಂದ್ರದ ಬಜೆಟ್ ಕೊರತೆ ಸಾವಿರಕೋಟಿಗಳ ಸುತ್ತಮುತ್ತ ಇದ್ದದ್ದು 5 ಸಾವಿರ ಕೋಟಿಗಳಿಗೇರಿದೆ.ರೀಗನ್ ಸರ್ಕಾರದ ಬಜೆಟ್ ಕೊರತೆ, ಡಾಲರ್ ಅನ್ನು ಉದ್ದೇಶಪೂರ್ವಕ ಅಪಮೌಲ್ಯಗೊಳಿಸುತ್ತಿರುವುದರಿಂದ ಅಮೇರಿಕನ್ ಆರ್ಥಿಕತೆ ಕುಸಿಯುತಿರುವಂತೆ ಭಾರತಸರ್ಕಾರವೂ ಆರ್ಥಿಕ ದುಸ್ಥಿತಿಗೀಡಾಗಿದೆ. ಬಜೆಟ್

(8ನೇ ಪುಟ ನೋಡಿ)

# ರಾಜೀವ್ ಸರಕಾರದ ರಾಜೀನಾಮೆ ಮತ್ತು ಮರು ಚುನಾವಣೆಗಳಿಗಾಗಿ ಒತ್ತಾಯಿಸಲು

1. ಬರ ಮತ್ತು ನೆರೆ ಪರಿಹಾರಕ್ಕಾಗಿ
2. ಬೆಲೆ ಏರಿಕೆ ತಡೆಯಲು
3. ಕನಿಷ್ಟ ಕೂಲಿ ಮತ್ತು ಭೂ ಸುಧಾರಣೆ
4. ರೈತರ ಉತ್ಪನ್ನಗಳಿಗೆ ಸುಯೋಗ್ಯ ಬೆಲೆ
5. ಸರ್ವರಿಗೂ ಕೆಲಸ, ಶಿಕ್ಷಣ
6. ಮುಚ್ಚಿರುವ ಕಾರ್ಖಾನೆಗಳನ್ನು ತೆರೆಸಬೇಕೆಂದು
7. ದುರ್ಬಲ ವಿಭಾಗಗಳು ಮತ್ತು ಮಹಿಳೆಯರ ಮೇಲಿನ ಅತ್ಯಾಚಾರಗಳನ್ನು ಅಂತ್ಯಗೊಳಿಸಬೇಕೆಂದು
8. ಮಹಿಳೆಯರಿಗೆ ಸಮಾನ ಹಕ್ಕುಗಳಿಗಾಗಿ
9. ಪ್ರಜಾಪ್ರಭುತ್ವ ಮತ್ತು ಟ್ರೇಡ್ ಯೂನಿಯನ್ ಹಕ್ಕುಗಳಿಗಾಗಿ
10. ಪ್ರತ್ಯೇಕತಾವಾದ ಮತ್ತು ಕೋಮುವಾದದ ವಿರುದ್ಧ ದೃಢ ಕ್ರಮ
11. ಚುನಾವಣಾ ಸುಧಾರಣೆ ಹಾಗೂ ಕೇಂದ್ರ-ರಾಜ್ಯ ಸಂಬಂಧಗಳ ಪುನರ್ರಚನೆ
12. ಉನ್ನತಸ್ಥಾನಗಳಲ್ಲಿಯ ಭ್ರಷ್ಟಾಚಾರ ತಡೆಯಬೇಕೆಂದು ಒತ್ತಾಯಿಸಲು

**ದೆಹಲಿ ಚಲೋ**
**ಡಿಸಂಬರ್ 9**
**ಲಕ್ಷ ಲಕ್ಷ ಸಂಖ್ಯೆಯಲ್ಲಿ**
**ಭಾಗವಹಿಸಿ**

### ಸೋವಿಯತ್ ಅಂತರಿಕ್ಷ ಕಾರ್ಯಕ್ರಮ

# ಮೊಲ-ಆಮೆ ಕಥೆಯೋ ಅಥವಾ ಅಂತರಿಕ್ಷದತ್ತ ಮಾನವನ ವಿಕಾಸವೇ ?

ಮೊಲ-ಆಮೆಯ ಓಟ ಸ್ಪರ್ಧೆಯ ಕಥೆ ಎಲ್ಲರಿಗೂ ಗೊತ್ತಿದೆ. ಇತ್ತೀಚೆಗೆ "ದೆಬೋನೀರ್" ಆಂಗ್ಲ ಪತ್ರಿಕೆಯಲ್ಲಿ ಪ್ರಕಟವಾದ ಲೇಖನವೊಂದು ಅಂತರಿಕ್ಷದಲ್ಲಿ ಸೋವಿಯತ್ ಮುನ್ನಡೆಯನ್ನು ಮೊಲ-ಆಮೆಯ ಕಥೆಗೆ ಹೋಲಿಸಿತು. "ಈ ರೀತಿ ಅಮೇರಿಕನ್ "ಮೊಲ" ನಿದ್ರಿಸುತ್ತಿದ್ದಾಗ, ರಶ್ಯನ್ "ಆಮೆ" ನಿಧಾನಗತಿಯಲ್ಲಿ ಸ್ಪಷ್ಟ ದಾರಿಯಲ್ಲಿ ಮುಂದುವರೆಯಿತು. ಆಮೆ ಗೆದ್ದಿದೆ ಮುಂದೆ ನಡೆದಿದೆ ಮಾತ್ರವಲ್ಲ.ತಕ್ಕಬೆಲೆ ಕೊಟ್ಟರೆ ಆಮೆ ಮೊಲಕ್ಕೆ ಸವಾರಿ ಕೊಡಲು ಸಿದ್ಧವಿದೆ" ಎಂದು ಆ ಪತ್ರಿಕೆ ಬರೆದಿದೆ.

ಈ ಹೇಳಿಕೆಗೆ ಕಾರಣವಾದದ್ದು ಇತ್ತೀಚೆಗೆ ಪ್ರಕಟವಾದ ಸುದ್ದಿಯೊಂದು. ಚಲೇಂಜರ್ ದುರಂತದಲ್ಲಿ ಅಂತರಿಕ್ಷ ಷಟಲ್‌ಗೆ ಆದ ಹಾನಿಯಿಂದ ಅಮೇರಿಕನ್ ಅಂತರಿಕ್ಷ ಕಾರ್ಯಕ್ರಮಗಳೆಲ್ಲಾ ಏಟು ಪೇರಾಗಿದೆ. ಹಲವು ಅಮೇರಿಕನ್ ಕಂಪನಿಗಳು ಸಂಪರ್ಕ ಮತ್ತು ಇತರ ರೀತಿಯ ಉಪಗ್ರಹಗಳನ್ನು ಉಡಾಯಿಸಲು ಹಾಕಿಕೊಂಡ ಕಾರ್ಯಕ್ರಮ ಸ್ಥಗಿತವಾಗಿವೆ. ಸೋವಿಯತ್ ಒಕ್ಕೂಟ ಇಂತಹ ಕಂಪನಿಗಳಿಗೆ-ತಕ್ಕ ಬೆಲೆಯ ಮೇಲೆ-ಉಡಾವಣೆಯ ಸವಲತ್ತುಗಳನ್ನು ಒದಗಿಸುವುದಾಗಿ ಸೂಚಿಸಿದೆ. ಇದು ಶಾಂತಿಯುತ ಅಂತರಿಕ್ಷ ಕಾರ್ಯಕ್ರಮದ ಸ್ವಾಭಾವಿಕ ಸಲಹೆ. ಆದರೆ ಈ ಸೂಚನೆಯನ್ನು ಬಂಡವಾಳಶಾಹಿ ದೇಶಗಳ ಆಳುವ ವರ್ಗಗಳುಗಂಭೀರವಾಗಿ ತೆಗೆದುಕೊಂಡಿವೆ. ಅವಮಾನವಾಗಿ ಪರಿಗಣಿಸಿವೆ.

ಎರಡು ವ್ಯವಸ್ಥೆಗಳಲ್ಲಿ ಆರ್ಥಿಕ ಬೆಳವಣಿಗೆಯಲ್ಲಿ ಮಾತ್ರವಲ್ಲ ವಿಜ್ಞಾನ ಮತ್ತು ತಂತ್ರಜ್ಞಾನ ಬೆಳವಣಿಗೆಗಳಲ್ಲೂ ಕೂಡಾ ಸತತ ಪೈಪೋಟಿ ನಡೆದಿದೆ. ಎಷ್ಟೋ ಕ್ಷೇತ್ರಗಳಲ್ಲಿ ಸಮಾಜವಾದಿ ಮಟ್ಟ ಬಂಡವಾಳಶಾಹಿ ಮಟ್ಟಕ್ಕೆ ಹೆಚ್ಚು ಕಡಿಮೆ ಹತ್ತಿರ ಬಂದಿದೆ. ಕೆಲವು ಕ್ಷೇತ್ರಗಳಲ್ಲಿ ಸೋವಿಯತ್ ವಿಜ್ಞಾನ ತಂತ್ರಜ್ಞಾನ ಅಮೇರಿಕಕ್ಕಿಂತ ಸ್ಪಷ್ಟವಾಗಿ ಮುಂದಿದೆ. ಅಂತರಿಕ್ಷ ವಿಜ್ಞಾನ ಇಂತಹ ಕ್ಷೇತ್ರಗಳಲ್ಲಿ ಪ್ರಮುಖವಾದುದು. ಮೇಲೆ ಹೇಳಿದ ಸುದ್ದಿ ಇದಕ್ಕೆ ಸ್ಪಷ್ಟ ಉದಾಹರಣೆ. ಅಮೇರಿಕನ್ ಸರ್ಕಾರ ಈ ಬಗ್ಗೆ ಸೋವಿಯತ್ ಸೂಚನೆಯನ್ನು ಅಂಗೀಕರಿಸಲಿಕ್ಕಿಲ್ಲ. ಆದರೆ ಅಂತರಿಕ್ಷ ವಿಜ್ಞಾನದಲ್ಲಿ ಸೋವಿಯತ್ ಉತ್ಕೃಷ್ಟತೆ ಬಗ್ಗೆ ಯಾರಿಗೂ ಈಗ ಅನುಮಾನ ಉಳಿದಿಲ್ಲ.

ಕಳೆದ ವರ್ಷ ಸೋವಿಯತ್ ಒಕ್ಕೂಟ ಉಡಾಯಿಸಿದ 91 ರಾಕೆಟ್‌ಗಳಲ್ಲಿ ಒಂದು ಮಾತ್ರ ವಿಫಲವಾಯಿತು ಅದೇ ಅವಧಿಯಲ್ಲಿ ಅಮೇರಿಕ ಉಡಾಯಿಸಿದ ಒಂಬತ್ತು ರಾಕೆಟುಗಳಲ್ಲಿ ಮೂರು (ಚಲೆಂಜರ್—ಅಂತರಿಕ್ಷ ಷಟಲ್ ದುರಂತ ಸೇರಿ) ವಿಫಲವಾದವು ಅಮೇರಿಕನ್ ಅಂತರಿಕ್ಷ ಕಾರ್ಯಕ್ರಮ ಬಿಕ್ಕಟ್ಟನಲ್ಲಿದ್ದರೆ, ಸೋವಿಯತ್ ಕಾರ್ಯಕ್ರಮ ಹೊಸ ಲೋಕಗಳ ಕದ ತಟ್ಟುತ್ತಿದೆ. ಈ ವರ್ಷ ಮೇ ತಿಂಗಳಲ್ಲಿ ಹೊಸ ರೀತಿಯ ಅತ್ಯಂತ ಶಕ್ತಿ ಶಾಲಿಯಾದ "ಎನರ್ಜಿಯ" ರಾಕೆಟ್‌ಗಳ ಉಡಾವಣೆಯ ಸಫಲತೆ ಸೋವಿಯತ್ ಮುನ್ನಡೆಯ ಸಂಕೇತ (ಬಾಕ್ಸ್ ನೋಡಿ)

## ಬಂಡವಾಳಶಾಹಿಗಳಿಗೆ ಆತಂಕ

ಅಂತರಿಕ್ಷದಲ್ಲಿ ಸೋವಿಯತ್ ಮುನ್ನಡೆ ಸ್ವಾಭಾವಿಕವಾಗಿಯೇ ಬಂಡವಾಳಶಾಹಿಗಳಿಗೆ ಆತಂಕ ಉಂಟು ಮಾಡಿದೆ. ಇದು ಪತ್ರಿಕೆ (ಮತ್ತಿತರ ಸಮೂಹ ಮಧ್ಯಮಗಳಲ್ಲಿ)ಪ್ರತಿಫಲನಗೊಂಡಿದೆ. ಈ ಆಗಸ್ಟ್‌ನಲ್ಲಿ ನ್ಯೂಸ್ ವೀಕ್, ದ ಟೈಂಸ್ ಮತ್ತು ನ್ಯೂಯಾರ್ಕ್ ಟೈಂಸ್ ಈ ಬಗ್ಗೆ ವಿವರವಾದ ಲೇಖನ, ವಿಶ್ಲೇಷಣೆಗಳನ್ನು ಪ್ರಕಟಪಡಿಸಿದವು. "ನ್ಯೂಸ್‌ವೀಕ್" ಅಮೇರಿಕಾ ಅಂತರಿಕ್ಷದ ಸ್ಪರ್ಧೆಯಲ್ಲಿ ಸೋತಿದೆ ಎಂದು ಅತ್ತರೆ, ಉಳಿದ ಪತ್ರಿಕೆಗಳು ಅಂತರಿಕ್ಷದ ಕೈಗಾರಿಕರಣ ನಡೆಸಿ ಸೋವಿಯತ್ ಮುಂದಿನ ಶತಮಾನದಲ್ಲಿ ಅತ್ಯಂತದೊಡ್ಡ ಆರ್ಥಿಕ ಶಕ್ತಿಯಾಗುತ್ತದೆ ಎಂಬ ಭವಿಷ್ಯ ನುಡಿದಿವೆ.

ಹಲವು ಪತ್ರಿಕೆಗಳು ಅಮೇರಿಕನ್ ಸೋಲಿಗೆ ಕಾರಣಗಳನ್ನು ಹುಡುಕಲು ಪ್ರಯತ್ನಿಸಿವೆ. ಹೆಚ್ಚಿನ ಪತ್ರಿಕೆಗಳ ಚಂದ್ರನ ಮೇಲೆಮಾನವನ ಪಾದಾರ್ಪಣದ ನಂತರ ಸುಸಂಬದ್ಧವಾದ ದೂರಗಾಮಿ ಯೋಜನೆಯ ಅಭಾವವೇ ಇದಕ್ಕೆ ಕಾರಣ ಎಂಬ ತೀರ್ಮಾನಕ್ಕೆ ಬಂದಿವೆ. ಬಹಳಷ್ಟು ಪತ್ರಿಕೆಗಳು "ಥಳುಕಿನ ಪ್ರಚಾರ ಗಿಟ್ಟಿಸುವ ಅಂತರಿಕ್ಷ ಷಟಲ್ ಎಂಬ ಬಿಳಿಯಾನೆ" ಮೇಲೆ ಅತ್ಯಂತ ಹೆಚ್ಚಿನ ಒತ್ತು ಹಾಕಿದ್ದನ್ನು ಟೀಕಿಸಿವೆ. ಅಂತರಿಕ್ಷ ಷಟಲ್ ಹಲವು ಪುನ: ಉಪಯೋಗಿಸಬಹುದಾದ ಭಾಗಗಳನ್ನು ಹೊಂದಿದ್ದು, ಉಪಗ್ರಹಗಳನ್ನು ಉಡಾಯಿಸಲು ಅಗ್ಗದ ವೈವಿಧ್ಯಮಯ ಉಪಯೋಗದ ಸಾಧನವಾಗಬೇಕಿತ್ತು. ಆದರೆ ಹಲವು ಕಾರಣಗಳಿಂದ ಭಾರಿ ದುಬಾರಿಯಾದ ಪ್ರಮಾದದಂತೆ ಇಂದು ಕಂಡು ಬರುತ್ತಿದೆ. ಹಲವು ವಿನ್ಯಾಸದ ದೋಷಗಳು, ನೈಜವಲ್ಲದ ಯೋಜನೆಗಳು, ಅಮೇರಿಕ ಅಂತರಿಕ್ಷ ಸಂಸ್ಥೆ ಮತ್ತು ವಾಯು ಪಡೆಗಳ ಪರಸ್ಪರ ವಿರುದ್ಧವಾದ ಅವಶ್ಯಕತೆಗಳು (ಬೇಡಿಕೆಗಳು) ಇವೇ ಆ ಕೆಲವು ಕಾರಣಗಳು ಷಟಲ್ ಹಿಂದೆ ಉಪಯೋಗಿಸುತ್ತಿದ್ದ ಒಂದೇ ಬಾರಿ ಉಪಹೋಗಿಸಬಹುದಾದ 'ಸ್ಯಾಟರ್ನ್' ಮತ್ತು "ಟೈಟಾನ್" ರಾಕೆಟ್‌ಗಳಿಗಿಂತ ದುಬಾರಿಯಾಯಿತು. ಎಂದು ಷಟಲ್-ಟೀಕಾಕಾರರ ಅಭಿಪ್ರಾಯ. ಷಟಲ್‌ಗ ತಾರಾಸಮರದ ಭೀಕರ ಯೋಜನೆಯಲ್ಲಿ ಸಹ ದೊಡ್ಡ ಪಾತ್ರವಿತ್ತು.

ಇವೆಲ್ಲಾ ಅಂಶಿತವಾಗಿ ಕಾರಣವಾದರೂ, ಅಮೇರಿಕನ್ ಸೋಲನ್ನು ಇದರಿಂದ ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವುದು ಕಷ್ಟ. ಮುಖ್ಯ ವ್ಯತ್ಯಾಸವಿರುವುದು "ದೂರಗಾಮಿ ಯೋಜನೆ" ಯು ಅಭಾವದಲ್ಲಲ್ಲ. ಯೋಜನೆಯ ಸ್ವಭಾವದಲ್ಲಿ. ಅಮೇರಿಕನ್ ಅಂತರಿಕ್ಷದ ಕಾರ್ಯಕ್ರಮದ ಮುಖ್ಯ ಉದ್ದೇಶ ಅಂತರಿಕ್ಷದ ಮಿಲಿಟರೀಕರಣ. ಇಡೀ ಜಗತ್ತನ್ನು ಆಳುವ ಹೆಗ್ಗಳಿಕೆ ಗಳಿಸುವುದು ಇದಕ್ಕೆ ವ್ಯತಿರಿಕ್ತವಾಗಿ ಸೋವಿಯತ್ ಅಂತರಿಕ್ಷ ಕಾರ್ಯಕ್ರಮ ಅಂತರಕ್ಷವನ್ನು ಶಾಂತಿಯುತ ಮಾನವ ಕಲ್ಯಾಣದ ಉದ್ದೇಶಗಳಿಗೆ ಬಳಸುವ ಉದ್ದೇಶ ಹೊಂದಿದೆ. ತಾರಾಸಮರಕ್ಕೆ ವಿರುದ್ಧವಾಗಿ ತಾರಾ ಶಾಂತಿಯ ಕಾರ್ಯಕ್ರಮ. ಅಮೇರಿಕನ್ ಅಂತರಿಕ್ಷ ಕಾರ್ಯಕ್ರಮವನ್ನು ತಮ್ಮ ಭಾರೀ ಲಾಭಗಳಿಗೆ ಸರಿಯಾಗಿ ತಿರುಚುವ ಸಾಮರ್ಥ್ಯವನ್ನು ಅಮೇರಿಕದ ಭಾರಿ ವೈಮಾನಿಕ ಕೈಗಾರಿಕೆಗಳು ಹೊಂದಿವೆ. ಗರಿಷ್ಟ ಲಾಭದ ದೃಷ್ಟಿಯಿಂದ ಮಾತ್ರ ತಯಾಸಿದ ಯಾವುದೇ ಯೋಜನೆ ಬಿಕ್ಕಟ್ಟಿಗೆ ದಾರಿ ಮಾಡಿಕೊಟ್ಟಿತು. ಸಮಾಜಕ್ಕೆ ವಿನಹ ಘನವಾದ ಉದ್ದೇಶಗಳನ್ನು ಪೂರೈಸಲಾರದು. ಆದ್ದರಿಂದ ಅಂತರಿಕ್ಷದಲ್ಲಿ ಅಮೇರಿಕನ್ ಸೋಲು, ಬಂಡವಾಳಶಾಹಿ ಪದ್ಧತಿಯ ಸೋಲು.

## ಅಂತರಿಕ್ಷದ ಕೈಗಾರೀಕರಣದತ್ತ

ಅಮೇರಿನ್ ಬಿಕ್ಕಟ್ಟಿನ ಅಂತರಿಕ್ಷ ಯೋಜನೆಗೆ, ವ್ಯತಿರಿಕ್ತವಾಗಿ, ಸೋವಿಯೆತ್ ಕಾರ್ಯಕ್ರಮ "ಅಂತರಿಕ್ಷ ಕಡೆ ಮಾನವ ವಿಕಾಸದ ಪ್ರಕ್ರಿಯೆ ಒಳಗೊಂಡಿದೆ"ಎಂದು ಅಮೇರಿಕನ್ ವಿಜ್ಞಾನಿ ನಿಕೊಲಸ್ ಜಾನ್‌ತನ್ ಅಭಿಪ್ರಾಯ. ಅಂತರಿಕ್ಷದಲ್ಲಿ ಕೈಗಾರಿಕಾ ಪ್ರಕ್ರಿಯೆಗಳನ್ನು ಬೆಳೆಸುವುದಕ್ಕೆ ಕೊಟ್ಟಿರುವ ಪ್ರಾಮುಖ್ಯತೆಯೇ ಸೋವಿಯೆತ್ ಮುನ್ನಡೆಗೆ ಕಾರಣ. ಅರೆವಾಹಕಗಳು ಮತ್ತು ಔಷಧಿ ಸಾಮಗ್ರಿಗಳ ಕೈಗಾರಿಕಾ ಉತ್ಪಾದನೆ ವಿಶೇಷ ಒತ್ತು ನೀಡಲಾಗಿದೆ. (ಇವೆರಡರ ಉತ್ಪಾದನೆಗೆ ಬೇಕಾದ ವಿಶೇಷ ಪರಿಸರ ಅಂತರಿಕ್ಷದಲ್ಲಿ ಸುಲಭವಾಗಿ ದೊರೆಯುತ್ತದೆ.) ಇದು 1990ರ ದಶಕದಲ್ಲೇ ಆರಂಭವಾಗುವ ತಾಂತ್ರಿಕ ಸಾಧ್ಯತೆಗಳಿವೆ. ಇದಲ್ಲದೆ ಸಂಪರ್ಕ ಸಾಧನಗಳು,ದೂರಗ್ರಹಣ (remote sensing) ಮತ್ತು ಹವಾಮಾನ ಸಂಶೋಧನೆಗಳಲ್ಲಿ ಇನ್ನಷ್ಟು ಬೆಳವಣಿಗೆಗಳು ಆರ್ಥಿಕವಾಗಿ ಪ್ರಯೋಜನಕಾರಿ.

ಅಂತರಿಕ್ಷದಲ್ಲಿ ಕೈಗಾರಿಕೆಗಳ ಪ್ರಯೋಗವನ್ನು ಸಫಲಗೊಳಿಸಲು ಅಂತರಿಕ್ಷದ ಭಾರರಹಿತ ಸ್ಥಿತಿಯಲ್ಲಿ ಮಾನವ ಕಳೆಯಬಹುದಾದ ಗರಿಷ್ಟ ಅವಧಿಯನ್ನು ಹೆಚ್ಚಿಸಲು ಸೋವಿಯೆತ್ ಕಾರ್ಯಕ್ರಮದಲ್ಲಿ ಪ್ರಾಮುಖ್ಯತೆ ಕೊಡಲಾಗಿದೆ. ಸೋವಿಯೆತ್ ಗಗನ ಯಾತ್ರಿಗಳಲ್ಲಿ ಹನ್ನೊಂದು ಜನ 200 ದಿನಗಳಿಗಿಂತಲೂ ದೀರ್ಘವಾದ ಅವಧಿಯನ್ನು ಅಂತರಿಕ್ಷದಲ್ಲಿ ಕಳೆದಿದ್ದಾರೆ. ಸೋವಿಯತ್ ವಿಜ್ಞಾನಿಗಳು ಅಂತರಿಕ್ಷದಲ್ಲಿ ದೀರ್ಘಕಾಲ ವಾಸದಿಂದ ಮಾನವನ ದೇಹ ಮತ್ತು ಮನಸ್ಸಿನ ಮೇಲೆ ಆಗುವ ಪರಿಣಾಮಗಳ ಬಗ್ಗೆ ಅಮೂಲ್ಯ ಅನುಭವ ಈಗಾಗಲೇ ಗಳಿಸಿದ್ದಾರೆ. ಕೃತಕ ಪರಿಸರಗಳನ್ನು ನಿರ್ಮಿಸಿ ಈ ಬಗ್ಗೆ ಇನ್ನೂ ಹೆಚ್ಚಿನ ಅಧ್ಯಯನ ನಡೆದಿದೆ.

ಅಂತರಿಕ್ಷದಲ್ಲಿ ಕೈಗಾರಿಕೀಕರಣಕ್ಕೆ ವಿದ್ಯುತ್ ಶಕ್ತಿ (ಅಥವಾ ಯಾವುದೇ ರೂಪದ ಶಕ್ತಿ) ಅತ್ಯಗತ್ಯ. ದೊಡ್ಡ

(3ನೇ ಪುಟ ನೋಡಿ)

### 'ಎನರ್ಜಿಯ' ರಾಕೆಟ್

'ಎನರ್ಜಿಯ' ಬೂಸ್ಟರ್ ರಾಕೆಟ್ ಈ ವರೆಗೆ ನಿರ್ಮಿಸಿದ ಜಗತ್ತಿನ ಅತ್ಯಂತ ಶಕ್ತಿಶಾಲಿ ರಾಕೆಟ್. ಇದು 100ಟನ್ ಸಾಮಗ್ರಿಗಳನ್ನು ಅಂತರಿಕ್ಷಕ್ಕೆ ಸಲೀಸಾಗಿ ಒಯ್ಯಬಹುದು. ಇದರ ಸಾಮರ್ಥ್ಯ ಅಮೇರಿಕನ್ ಷಟಲ್‌ನ ಮೂರುಪಟ್ಟು. ಚಂದ್ರನ ಮೇಲೆ ಮಾನವನನ್ನು ಇಳಿಸಿದ ಅಪೊಲೋವನ್ನು ಅಂತರಿಕ್ಷಕ್ಕೆ ಉಡಾಯಿಸಿದ 'ಸ್ಯಾಟರ್ನ್' ರಾಕೆಟ್‌ನ ಎರಡು ಪಟ್ಟು. 'ಎನರ್ಜಿಯ' ಪುನಃಉಪಯೋಗಿಸಬಹುದಾದ ಹಲವು ಭಾಗಗಳನ್ನು ಹೊಂದಿವೆ. 'ಎನರ್ಜಿಯ' ಬಳಸಿ ಉಪಗ್ರಹ ಉಡಾಯಿಸುವ ವೆಚ್ಚ, ಅಮೇರಿಕನ್ ಷಟಲ್ ಬಳಸಿದ್ದರ ಶೇಕಡಾ 5ರಿಂದ ಶೇಕಡಾ 10ರಷ್ಟಿದೆ, ಅಷ್ಟೇ.

'ಎನರ್ಜಿಯ' ಕುಟುಂಬದ ರಾಕೆಟುಗಳು ಸೋವಿಯೆತ್ ಅಂತರಿಕ್ಷ ಕಾರ್ಯಕ್ರಮದಲ್ಲಿ ಮುಖ್ಯ ಮಜಲು. ಹಲವು ಭವಿಷ್ಯದ ಕಾರ್ಯಕ್ರಮಗಳಲ್ಲಿ 'ಎನರ್ಜಿಯ' ಮುಖ್ಯ ಪಾತ್ರ ವಹಿಸಲಿದೆ.

### ಎನರ್ಜಿಯ ರಾಕೆಟ್ ಮತ್ತು ಅಂತರಿಕ್ಷ ಭವಿಷ್ಯ

"ಎನರ್ಜಿಯ" ಸೋವಿಯೆತ್ ಒಕ್ಕೂಟಕ್ಕೆ ಕೆಳಕಂಡ ಸಾಮರ್ಥ್ಯಗಳನ್ನು ಕೊಡುವುದು.

ಈ ಶತಮಾನದ ಕೊನೆಯ ಹೊತ್ತಿಗೆ ಸೋವಿಯೆತ್ ನಗರಗಳನ್ನು ಬೆಳಗಿಸಬಲ್ಲ ಕನ್ನಡಿಗಳ ಸಮುಚ್ಚಯ ಅಂತರಿಕ್ಷದಲ್ಲಿ ಸ್ಥಾಪನೆಯ ಸಾಮರ್ಥ್ಯ (ವೆಚ್ಚ ಸುಮಾರು 20 ಶತಕೋಟಿ ಪೌಂಡು) ಸಂಪನ್ಮೂಲಗಳಿರುವ ಸೈಬೀರಿಯಾದಲ್ಲಿ ತಯಾರಾದ ಶಕ್ತಿಯನ್ನು ಲೇಸರ್ ಕಿರಣಗಳಿಂದ ಸಾವಿರಾರುಮೈಲಿಗಳಷ್ಟುದೂರವಿರುವ ಸೋವಿಯೆತ್‌ನಗರಸಾಗಾಣಿಕೆ ಇದುವಿದ್ಯುತ್ ಸಾಗಾಣಿಕೆ ರೈಲುಗಳಲ್ಲದೆ ಲೈನ್,ಕಂಬಗಳು,ಪೈಪಲೈನ್,1995-2005ರಷ್ಟುಹೊತ್ತಿಗೆ25ಶತಕೋಟಿ ಪೌಂಡುಗಳಷ್ಟು ವೆಚ್ಚದಲ್ಲಿ 40 'ಎನರ್ಜಿಯ' ಉಡಾವಣೆಗಳಿಂದ 500 ಮೆಗಾವಾಟ್‌ಗಳ ಸೌರ ವಿದ್ಯುತ್ ಶಕ್ತಿ ಕೇಂದ್ರ, ಜಾಲದ ಸ್ಥಾಪನೆ ಇದಕ್ಕೆ 65 ಶತಕೋಟಿ ಪೌಂಡುಗಳು ಅಂದಾಜು ವೆಚ್ಚವಾಗಲಿದ್ದು, 30 ವರ್ಷಗಳಲ್ಲಿ ತನ್ನ ಖರ್ಚು ಸರಿದೂಗಿಸಬಹುದು.

ಹತ್ತು ವರ್ಷಗಳಲ್ಲಿ ಮಂಗಳ ಗ್ರಹದ ಸುತ್ತ ಅಂತರಿಕ್ಷ ನಿಲ್ದಾಣ ಮತ್ತು 2005ರ ಹೊತ್ತಿಗೆ ಮಂಗಳ ಗ್ರಹದ ಮೇಲೆ ಮಾನವನ ಪದಾರ್ಪಣ

—"ದಿ ಟೈಂಸ್ ವರದಿ"

## ಜಾಥಾ ಡೈರಿಯ ಪುಟಗಳಿಂದ....

# ಭಾರತ ಜಾಥಕ್ಕೆ ಆಂಧ್ರಾದ್ಯಂತ ಸಂಭ್ರಮದ ಸ್ವಾಗತ

ಚಂದ್ರಶೇಖರ ಬಾಳೆ

24-11-87

**ಗೋಪಾಲಪುರ ಕ್ಯಾಂಪ್**

ಎಲ್ಲೆಲ್ಲೂ ಕೆಂಪು ವಸ್ತ್ರ ಧರಿಸಿದಸಂಗಾತಿಗಳ ದಂಡು 'ಕೆಂಪು ವಂದನೆ'ಯ ಘೋಷಣೆಗಳ ಸಾಲು ಹತ್ತುಸಾವಿರ ರೈತ ಕಾರ್ಮಿಕರು ವಿದ್ಯಾರ್ಥಿ; ಕೃಷಿಕಾರ್ಮಿಕರು, ಮಹಿಳೆಯರು, 'ಕೆಂಪು ವಂದನೆ'ಯ ಘೋಷ ಮೊಳಗಿಸುತ್ತಿದ್ದರು.

ನವೆಂಬರ್ 27 ರಂದು ಸಂಜೆ ಕಿಸಾನ್ ಮಜ್ದೂರ್ ಜಾಥಾ ಸ್ವಾಗತಿಸಲು ಜನ ಸಾಲುಗಟ್ಟಿ ನಿಂತಿದ್ದರು.

ನವಂಬರ್ 23ರಂದು ಸಂಜೆ 7 ಗಂಟೆಗೆ ಕರ್ನೂಲ್‌ನಲ್ಲಿ ಬಹಿರಂಗ ಸಭೆ ಏರ್ಪಡಿಸಲಾಗಿತ್ತು. ಕಾ. ನರಸಿಂಹಯ್ಯ ಸಿ.ಪಿ.ಐ.(ಎಂ) ಜಿಲ್ಲಾ ಸಮಿತಿ ಕಾರ್ಯದರ್ಶಿಯವರು ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿದರು. ಕಾ. ಹರಿಕಿಶನ್ ಸಿಂಗ್ ಸುರ್ಜಿತ್, ಸಿ.ಪಿ.ಐ (ಎಂ) ಪಾಲಿಟ್ ಬ್ಯೂರೋ ಸದಸ್ಯರು, ಹಾಗೂ ಅಖಿಲ ಭಾರತ ಕಿಸಾನ ಸಭಾ ಉಪಾಧ್ಯಕ್ಷರು, ಕಾ.ವೈ.ವಿಕ್ರಿಷ್ಣಾರಾವ್ ಅಖಿಲಭಾರತ ಕಿಸಾನ್ ಸಭಾ ಪ್ರ.ಕಾರ್ಯದರ್ಶಿಮತ್ತು ಕಾ.ಎಮ್.ಎ.ಗಫುರ್ ರಾಜ್ಯ ಸಮಿತಿ ಸಿ.ಐ.ಟಿ.ಯು. ಕಾರ್ಯದರ್ಶಿ ಮತ್ತು ಕಾ. ಸರಳಾ ದೇವಿ ರಾಜ್ಯ ಮಹಿಳಾ ಸಂಘಟನಾ ಕಾರ್ಯದರ್ಶಿ ಮಾತ ನಾಡಿದರು. ಜಾಥಾವನ್ನು ಪ್ರತಿನಿಧಿಸಿ ಕಾ.ಇ. ಪದ್ಮನಾಭನ್ ಕಾ. ಸಿ.ಕೆ. ಚಂದ್ರಪ್ಪನ್ ಕಾ. ಕೆ.ಎಸ್. ಶಿವ ಕುಮಾರ್ ಮಾತನಾಡಿದರು.

ಕಾ. ಸುರ್ಜಿತ್ ಅವರು ರಾಷ್ಟ್ರದಲ್ಲಿ ಆರ್ಥಿಕ ರಾಜಕೀಯ ಅನಿಶ್ಚತೆಯನ್ನು ವಿವರಿಸಿ, ಕಾಂಗ್ರೆಸ್‌ಜನತೆಯ ವಿಶ್ವಾಸ ವನ್ನು ತೀವ್ರಗತಿಯಲ್ಲಿ ಕಳೆದು ಕೊಳ್ಳುತ್ತಿದೆ. ಉನ್ನತ ಮಟ್ಟದಲ್ಲಿ ಭ್ರಷ್ಟಾಚಾರ ನಡೆದಿದ್ದು, ಕೋಮು, ವಿಚ್ಛಿದ್ರಕಾರಿಅಗಳಿಂದ ದೇಶದ ಐಕ್ಯತೆ ಗಂಡಾಂತರದಲ್ಲಿದೆ. ರಾಷ್ಟ್ರದ ಎಲ್ಲಾ ದುಡಿಯುವ ಜನ ಸಮೂಹ ಮೂಲ ಭೂತ ಸಮಸ್ಯೆಗಳಿಗೆ ಪರಿಹಾರ ಕಣದೆ ! ಅತೃಪ್ತಿ ಮಿತಿ ಮೀರಿದೆ. ಇಂತಹ ಪರಿಸ್ಥಿತಿಯಲ್ಲಿ ಈ ರಾಷ್ಟ್ರಕ್ಕೆ ಪರ್ಯಾಯವೇನೆಂಬುದು ಅತಿಮುಖ್ಯ ಪ್ರಶ್ನೆಯಾಗಿದೆ.

ಕೋಮುವಾದಿ ಪಕ್ಷಗಳು ಎಡಶಕ್ತಿ ಗಳನ್ನು ಹೊರಗಿಟ್ಟು, 1977ರ ಇನ್ನೊಂದು ಮಾದರಿಯಲ್ಲಿ ಅಧಿಕಾ ರಕ್ಕೆ ಬರುವ ಪರ್ಯಾಯವನ್ನು ಪ್ರಚಾರ ಮಾಡುತ್ತಿವೆ. ಆದರೆ ಇಂದು 1977ರಿಂದ 1987ಕ್ಕೆ ಬರುವಾಗ ಈ ದೇಶದಲ್ಲಿ ಎಡ ಶಕ್ತಿಗಳು, ಕೋಟಿ ಗಟ್ಟಲೆ ಜನ ಸಾಮೂಹವನ್ನು ಸಮೂಹಿಕ ಸಂಘಟನೆಯ ಅಡಿಯಲ್ಲಿ ಸಂಘಟಿಸಿರುವುದರ ಜೊತೆಗೆ, ಅವುಗಳಲ್ಲಿ ಐಕ್ಯತೆಯಿಂದ 24, ಸಾಮೂಹಿಕ ಸಂಘಟನೆಗಳು 17, ಬೇಡಿಕೆಗಳ ಪರ್ಯಾಯ ಬೇಡಿಕೆಯನ್ನು ಮುಂದಿಟ್ಟು,ರಾಷ್ಟ್ರದ ಜನತೆಯ ಮುಂದೆ ಹೋಗುವ ಮಟ್ಟಕ್ಕೆ ಬೆಳೆದು ನಿಂತಿವೆ.

ಆದರೆ ಎಡಶಕ್ತಿಗಳು ಪರ್ಯಾಯ ವೆಂದು ಹೇಳುತ್ತಿಲ್ಲ. 17 ಬೇಡಿಕೆಗಳ ಆಧಾರದಲ್ಲಿ ಚಳುವಳಿಯನ್ನು ನಡೆಸುವ ಮುಖಾಂತರ ದೇಶದ ಸಮಗ್ರತೆ ಯನ್ನು ರಕ್ಷಿಸುವ, ಕೋಮುವಾದ ವನ್ನು ಹಿಮ್ಮೆಟ್ಟಿಸುವ, ಎಡ ಮತ್ತು ಜಾತ್ಯತೀತ ಐಕ್ಯತೆ ಮತ್ತು ಪರ್ಯಾಯ ಮಾತ್ರ ಸಾಧ್ಯ. ಅದು ಎಡ ಶಕ್ತಿಗಳಿಂದ ರೂಪಿಸಲು ಸಾಧ್ಯವೆಂದು ಎಡಶಕ್ತಿಗಳು ನಂಬಿವೆಯೆಂದು ವಿವರಿಸಿದರು.

ಕಾರ್ನೂಲ್ ಜಿಲ್ಲೆಗೆ ಜಾತ ಪಾದಾರ್ಪಣೆ ಮಾಡುವ ಮುಖಾಂತರ, ಹೊಸ ಸ್ಫೂರ್ತಿಯನ್ನೇ ನೀಡಿತು. 'ಪ್ರಜಾನಾಟ್ಯ ಮಂಡಳಿ' ಸಂಗಾತಿ ಗಳು, ಮುಂಚೂಣಿಯಲ್ಲಿ ಪೊಟ್ ಜೀಪ್‌ನಲ್ಲಿ ಹೋಗಿ ಹಾಡುಗಳನ್ನು ಹಾಡುವ ಮುಖಾಂತರ, ನೂರಾರು ಜನ ಜಾತಾವನ್ನು ಸ್ವಾಗತಿಸುವ ತವಕದಲ್ಲಿ ಕಾಯುತ್ತ ನಿಂತಿರುತ್ತಿದ್ದರು. ಜಾತಾದ ಝಂಡಾಗಳಿಂದ ಅಲಂಕೃತ ವಾದ ಬಸ್ಸು, ನಗರ, ಹಳ್ಳಿಯನ್ನು ತಲುಪುತ್ತಲೇ, ವಿದ್ಯಾರ್ಥಿ, ಯುವಕರು ಕಾರ್ಮಿಕರು, ಮಹಿಳೆಯರು ಝಂಡಾ ಗಳನ್ನೆತ್ತಿ ಘೋಷಣೆಗಳೊಂದಿಗೆ ಹೂವಿನ ಮಳೆಗೈದು, ಹಾರಗಳಿಂದ ಮುಖಂಡರನ್ನು ಸ್ವಾಗತಿಸಿ, ಸ್ಫೂರ್ತಿ ನೀಡುತ್ತಿದ್ದರು. ಹಲವಾರು ಮುಖಂಡರು ಭಾಷಣಗಳ ಮುಖಾಂತರ ಜನರಲ್ಲಿ ವಿಶ್ವಾಸವನ್ನು ಮೂಡಿಸಿದುರು ಸ್ಫೂರ್ತಿ ನೀಡುತ್ತಿದ್ದರು.

ಮುಂಜಾನೆ ಎರ್ರಗುಡಿಗೆ ಜಾತ ತಲುಪಿತು. ಕಾಂಗ್ರೆಸ್ ಗುಂಡಾಗಳಿಂದ ಹುತಾತ್ಮರಾದ ಸಿ.ಪಿ.ಐ.(ಎಂ) ಶಾಸಕ ಕಾ. ಈಶ್ವರ ರೆಡ್ಡಿಯವರ ಹಳ್ಳಿಯಾಗಿತ್ತು. ನಮ್ಮದು ಮುಂದೆ ಪತ್ತಿಕೊಂಡ, ಆಸ್ಪರಿ, ಆಡೋನಿ, ಯಮ್ಮಿಗನೂರ, ಕೊಡಮೂರುಗಳಲ್ಲಿ ಜಾತಾಕ್ಕೆ ಅದ್ದೂರಿಯ ಸ್ವಾಗತ ನೀಡಲಾಯಿತು. ಕೆಲವೆಡೆ ಡೊಳ್ಳು ಹಲಗೆ ಗಳಿಂದ, ಇನ್ನೂ ಹಲವಾರು ವಿಧದ ಗ್ರಾಮೀಣ ವಾದ್ಯಗಳಿಂದ ಮತ್ತೊಂದೆಡೆ ಕೆಂಪು ಸಮವಸ್ತ್ರ ಧರಿಸಿ, ಕೈಯಲ್ಲಿ ಕುಡುಗೋಲು ಸುತ್ತಿಗೆಯನ್ನು ಹಿಡಿದು ನೃತ್ಯ ಮಾಡುವ ಮುಖಾಂತರ ಸ್ವಾಗತವನ್ನು ಕೋರಲಾಗುತ್ತಿತ್ತು.

**ಹೈದರಾಬಾದ್ ಕ್ಯಾಂಪ್**

25-11-87 ರಂದು ಮುಂಜಾನೆ ಆರು ಘಂಟೆಗೆ, ಬಹಿರಂಗ ಸಭೆಗೆ ಬರುವವರ ಘೋಷಣೆಕ್ಕೆ ವಾದ್ಯಗಳು ಜಾತಾದಲ್ಲಿರುವ ಸಂಗಾತಿಗಳು ದಿಂಡಿ, ಟಿ.ಬಿ.ಯಲ್ಲಿ ಮಲಗಿದ್ದವರನ್ನು ಬಡಿದೆಬ್ಬಿಸಿದವು. ಈ ಗ್ರಾಮದಿಂದ ಜಾತಾ ವನ್ನು ಸ್ವಾಗತಿಸುವ, ಜನರ ಪಾಲು ಗೊಳ್ಳುವಿಕೆ ವಿಶಿಷ್ಟ ಹಾಗೂ ಪ್ರತ್ಯೇಕ ಗಮನಿಸುವ ಅಂಶ ಎದ್ದು ಕಾಣುತ್ತಿತ್ತು. ಬರಗಾಲ, ಅಥವಾ ಕೇರಳ ದಲ್ಲಿದ್ದೇವೆಯೋ ಎನ್ನುವಂತಿತ್ತು. ಯಾಕೆಂದರೆ ತೆಲಂಗಾಣ ವೀರರ ನಾಡಾಗಿತ್ತು. ನಲಗೊಂಡಾ ಜಿಲ್ಲೆ, ತೆಲಂಗಾಣಾ ಕ್ರಾಂತಿಕಾರಿಗಳ ಹೃದಯ ವಾಗಿತ್ತು. ನಮ್ಮ ಜಾತಾದಲ್ಲಿ ಆಗಲೇ ತೆಲಂಗಾಣಾ ಯೋಧಕಾ. ಬಿ. ಎನ್ನಾ. ರೆಡ್ಡಿ, ಪಾರ್ಲಿಮೆಂಟ್ ಸದಸ್ಯರು, ಆಂಧ್ರ ಕಿಸಾನ್ ಸಭಾ ಅಧ್ಯಕ್ಷರು ಸೇರಿಕೊಂಡಿದ್ದರು. ಅವರನ್ನು ಬಂಡಿ ಗಾಲಿಗೆಕಟ್ಟಿ ಬಂಡಿ (ಚಕ್ಕಡಿ) ಯನ್ನು ಓಡಿಸಲಾಗಿತ್ತುಅಂತಹ ಸಾವನ್ನುಎದುರಿಸಿ, ಬದುಕುಳಿದ ನಾಯಕರಲ್ಲೊಬ್ಬರು ಅವರನ್ನು ಜನರನ್ನು ಭಾರಿ ಆದರ ದಿಂದ ಗೌರವಿಸುತ್ತಿದ್ದರು. ಅವರು ಮಾತನಾಡುತ್ತಲೇ ಖುಷಿಯಿಂದ ಚಪ್ಪಾಳೆ ತಟ್ಟುತ್ತಿದ್ದರು.

ದಿಂಡಿಯಲ್ಲಿ 500, ಕ್ಕೂ ಹೆಚ್ಚು ಜನ ಪಾಲುಗೊಂಡರು. ಅಲ್ಲಿಂದ ಹಳ್ಳಿಹಳ್ಳಿಗೆ, ಸ್ವಾಗತ ಕಮಾನುಗಳು, ನೂರಾರು ಜನ ಜಾತಾ ಬರುವ ಸುದ್ಧಿ ತಿಳಿದು ಯೋಜನೆ ಯಿಲ್ಲದ ಹಳ್ಳಿಗಳಲ್ಲಿ ಸಭೆಗಳನ್ನು ವ್ಯವಸ್ಥೆ ಮಾಡಲಾಗಿತ್ತು. ಅಂತಹ ಸಭೆಗಳಿಂದ ಯೋಜನೆಯಲ್ಲಿರುವ ಸಭೆ ಗಳಿಗೆ ಒಂದು ಸಾವಿರಾರು ಜನ ರೈತ ಕಾರ್ಮಿಕರು ಟ್ರಾಕ್ಟರ್‌ಗಳಲ್ಲಿ, ಲಾರಿಗಳಲ್ಲಿ, ಬಂಡಿಗಳಲ್ಲಿ ಬಂದ ಜನ ಆರು ಘಂಟೆ, ಎಂಟು ಘಂಟೆ ತಡವಾದರೂ ತಾಳ್ಮೆಯಿಂದ ಕಾಯುತ್ತಿದ್ದರು. ಅಷ್ಟು ತಡವಾಗಿ ಜಾತಾ ಬಂದರೂ, ಅದ್ದೂರಿಯ ಘೋಷಣೆಗಳೊಂದಿಗೆ ತಲೆಗೊಂದು ಝಂಡಾ ನ್ನು ಹಿಡಿದು ಸ್ವಾಗತಿಸಿದರು.

---

"ಲೆನಿನ್ ಹುಟ್ಟಿದ್ದು ಯಾವಾಗ?-ನವಂಬರ್ ಕ್ರಾಂತ್ರಿಯ ಮೊದಲೋ ಅಥವಾ ನಂತರವೋ"ಮಾಸ್ಕೋದಲ್ಲಿ ನವಂಬರ್‌ಕ್ರಾಂತ್ರಿಯ ಎಪ್ಪತ್ತನೇ ವಾರ್ಷಿಕೋತ್ಸವದ ಸಮಾರಂಭದಲ್ಲಿ ಒಬ್ಬ ವಿದೇಶೀ ಪ್ರತಿನಿಧಿಯ ಈ ಪ್ರಶ್ನೆ ಭಾಷಾಂತರಕಾರರಿಗೆ ಗೊಂದಲವುಂಟು ಮಾಡಿತು. ತಮಾಷೆಯಾಗಿ ಇದನ್ನು ಹೇಳಿರಬಹುದು ಎಂದು ಮೊದಲು ಅವರು ಭಾವಿಸಿದರು. ಆದರೆ ನಂತರ ಇದೇ ತಮಾಷೆಯ ವಸ್ತುವಾಯಿತು. ಮಾಸ್ಕೋನಲ್ಲಿ.

ಆ ವಿದೇಶೀ ಪ್ರತಿನಿಧಿ ಯಾರು ಗೊತ್ತೇ- ಭಾರತದ ಕಾಂಗ್ರೆಸ್ (ಐ)ನ ಪ್ರತಿನಿಧಿ ಮಂಡಲದ ಮುಖಂಡರಾಗಿದ್ದ ಹಾಗೂ ಎ.ಐ.ಸಿ.ಸಿ. (ಐ)ನ ಪ್ರಧಾನ ಕಾರ್ಯದರ್ಶಿಯೂ ಆಗಿರುವ ಶ್ರೀಯುತ ರಾಮ್‌ರತನ್‌ರಾಮ್

ಅವರದ್ದೇ ಇನ್ನೊಂದು ಹುಬ್ಬೇರಿಸಿದಪ್ರಶ್ನೆ "ನವಂಬರ್ ಕ್ರಾಂತಿಯೊಂದಿಗೆ ಲೆನಿನ್‌ರ ಸಂಬಂಧವೇನಿತ್ತು? ಅವರ ನಿಲುವು ಏನಿತ್ತು?"

ತುರ್ತು ಪರಿಸ್ಥಿತಿಯ ಬಗ್ಗೆ ಇಂದಿರಾಗಾಂಧಿಯವರ ನಿಲುವೇನಿತ್ತು ಎಂಬ ಪ್ರಶ್ನೆಯೂ ಅವರಲ್ಲಿರಬಹುದೇ?

---

# ಎಸ್. ಎಫ್. ಐ. 5ನೇ ರಾಜ್ಯ ಸಮ್ಮೇಳನ

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) 5 ನೇ ಕರ್ನಾಟಕ ರಾಜ್ಯ ಸಮ್ಮೇಳನವು 1988 ಜನವರಿ 16 ರಿಂದ 18ರ ವರೆಗೆ ವಿಶ್ವ ವಿದ್ಯಾನಿಲಯ ಕೇಂದ್ರವಾದ ಗುಲ್ಬರ್ಗಾ ನಗರದಲ್ಲಿ ಜರುಗುತ್ತದೆ.

ಸಮ್ಮೇಳನದ ಸಕಲಸಿದ್ಧತೆಗಳಿಗಾಗಿ ಈಗಾಗಲೇ ಡಿಸೆಂಬರ್ 2 ರಂದು ವಿವಿಧ ಸಂಘ ಸಂಸ್ಥೆಗಳ ಮತ್ತು ಶೈಕ್ಷಣಿಕ ಸಮುದಾಯದ ಪ್ರಮುಖ ವ್ಯಕ್ತಿ ಗಳನ್ನೊಳಗೊಂಡ ಸ್ವಾಗತ ಸಮಿತಿ ಯೊಂದನ್ನು ರಚಿಸಲಾಗಿದೆ. ಸಮ್ಮೇಳನದ ಪ್ರಥಮ ದಿನದಂದೇ ಬೃಹತ್ ವಿದ್ಯಾರ್ಥಿ ರ‍್ಯಾಲಿ ಏರ್ಪಡಿಸಲಾಗುವುದು. ಸಮ್ಮೇಳನದ ಅಂಗವಾಗಿ ಸ್ಮರಣ ಸಂಚಿಕೆ ಹಾಗೂ ವಿದ್ಯಾರ್ಥಿ ವೇದಿಕೆ ಪತ್ರಿಕೆಯ ವಿಶೇಷ ಸಂಚಿಕೆ ಯೊಂದನ್ನು ಬಿಡುಗಡೆ ಮಾಡಲು ಉದ್ದೇಶಿಸಲಾಗಿದೆ. ಇತರೆ ಪ್ರಕಟಣೆಗಳನ್ನು ಸಹ ಹೊರತರಲಾಗುವುದು. ವಿಚಾರಗೋಷ್ಠಿ ವಸ್ತು ಪ್ರದರ್ಶನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಹ ಏರ್ಪಡಿಸಲಾಗುವುದು.

ರಾಜ್ಯ ಸಮ್ಮೇನಕ್ಕೆ ಪೂರ್ವಭಾವಿಯಾಗಿ ಜಿಲ್ಲಾ ಮತ್ತು ಸ್ಥಳೀಯ ಸಮ್ಮೇಳನಗಳು ನಡೆಯಲಿವೆ. ಇದೇ ಸಂದರ್ಭದಲ್ಲಿ ಎಸ್.ಎಫ್.ಐ. ಸ್ಥಾಪನಾದಿನದ ಅಂಗವಾಗಿ ಡಿಸೆಂಬರ್ 30 ರಂದು ವಿದ್ಯಾರ್ಥಿಗಳಾಗಿ ವಿವಿಧ ರೀತಿಯ ಕ್ರೀಡಾ, ಸಾಂಸ್ಕೃತಿಕ ಮತ್ತು ಪ್ರತಿಭಾ ಸ್ಪರ್ಧೆಗಳನ್ನು ಏರ್ಪಡಿಸಲು ಶಾಖೆಗಳಿಗೆ ಕರೆ ನೀಡಲಾಗಿದೆ.

ರಾಜ್ಯ ಸಮ್ಮೇಳನದ ಕರಡು ವರದಿಯನ್ನು ಸಿದ್ಧ ಪಡಿಸಲು ಹಾಗೂ ಕಾರ್ಯಕಲಾಪಗಳ ಕುರಿತುಚರ್ಚಿಸಲು ಜನವರಿ 1 ಮತ್ತು 2 ರಂದು ಹರಿಹರ ದಲ್ಲಿ ಎಸ್.ಎಫ್.ಐ. ರಾಜ್ಯ ಸಮಿತಿಯ ಸಭೆ ಸೇರಲಿದೆ.

---

(2ನೇ ಪುಟದಿಂದ)

ಸೌರ ವಿದ್ಯುತ್ ಕೇಂದ್ರಗಳನ್ನು ಅಂತರಿಕ್ಷದಲ್ಲಿ ಜೋಡಿಸುವ ಮಹತ್ವಾಕಾಂಕ್ಷೆಯ ಯೋಜನೆಗಳು ಇವೆ. 100ರಿಂದ 300 ಕಿಲೋವಾಟು ಉತ್ಪಾದಿಸಬಲ್ಲ ಸೌರ ವಿದ್ಯುತ್ ಕೇಂದ್ರ (ಅಂತರಿಕ್ಷದಲ್ಲಿ) ಸದ್ಯದಲ್ಲೇ ಕಾರ್ಯ ಸಾಧ್ಯ ಎಂದು ಹೇಳಲಾಗಿದೆ. ಇಂತಹ ವಿದ್ಯುತ್, ಕೇಂದ್ರಗಳು ಉತ್ಪಾದನಾ ಸಂಕೀರ್ಣಗಳಿಗೆ, ಮಾಹಿತಿ ಸಂಪರ್ಕ ಜಾಲಗಳಿಗೆ ಬೇಕಾದ ಶಕ್ತಿ ಒದಗಿಸಬಲ್ಲವು. ಈ ಕೇಂದ್ರಗಳು ಇಂದು ಲಭ್ಯವಿರುವ ಕೇಂದ್ರಗಳಿಗಿಂತ 50 ಪಟ್ಟು ಹೆಚ್ಚು ಶಕ್ತಿ ಉತ್ಪಾದಿಸಬಲ್ಲವು. 21ನೇ ಶತಮಾನದ ಹೊತ್ತಿಗೆ ಉಪಗ್ರಹಗಳಿಂದ ಲೇಸರ್ ಕಿರಣಗಳ ಮೂಲಕ ಶಕ್ತಿ ರವಾನೆ ಸಾಧ್ಯವಾದೀತು.

ಅದ್ಭುತವೆಂದು ಕಂಡರೂ ಇಂತಹ ಯೋಜನೆಗಳು ಹೊಸತೇನಲ್ಲ. ಇಡೀ ಅಮೇರಿಕದ ವಿದ್ಯುತ್ ಶಕ್ತಿ ಅವಶ್ಯಕತೆಗಳನ್ನು ಪೂರೈಸಬಲ್ಲ 5000 ಮೆಗಾವಾಟು ಶಕ್ತಿಯ ಸುಮಾರು 60 ಉಪಗ್ರಹ ವಿದ್ಯುತ್ ಕೇಂದ್ರಗಳನ್ನು (ಪ್ರತಿಯೊಂದು142ಚ.ಕಿ.ಮೀ.ಗಾತ್ರದ್ದು) 500 ರಿಂದ3000 ಶತಕೋಟಿ ಡಾಲರುಗಳ ವೆಚ್ಚದಲ್ಲಿ ಯೋಜಿಸಲಾಗಿತ್ತು. ಆದರೆ ನೈಜವಲ್ಲದ ಈ ಯೋಜನೆ ಕಾರ್ಯಗತವಾಗಲೇ ಇಲ್ಲ.

ಸೋವಿಯೆತ್ ಅಂತರಿಕ್ಷದ ಶಾಂತಿಯುತ ಬಳಕೆಗೆ ಹಾಕಿ ಕೊಂಡಿರುವ ಕಾರ್ಯಕ್ರಮಗಳಿಗೆ ಹೋಲಿಸಿದರೆ 'ಪಾಶ್ಚಿಮಾತ್ಯ ಯೋಜನೆಗಳು ಕಾಮಿಕ್ ಪುಸ್ತಕದ ಕಪೋಲಕಲ್ಪನೆಯ ಕಥೆ ಮತ್ತು ದೂರದೃಷ್ಟಿ ರಹಿತ ಜಿಪುಣತನದಂತೆ ಕಂಡುಬರುತ್ತದೆ' ಎಂದು ದ ಟೈಂಸ್‌ನ ಅಭಿಪ್ರಾಯ. ○

# ಅಧ್ಯಕ್ಷ ರೀಗನ್‌ರ ಆರ್ಥಿಕ ಧೋರಣೆಯ ದಿವಾಳಿಕೋರತನ

ಅಮೇರಿಕಾದ (USA) ಮಹಾನ್ ನಗರ ನ್ಯೂಯಾರ್ಕ್‌ನಲ್ಲಿರುವ ವಾಲ್ ಸ್ಟ್ರೀಟ್ ಶೇರು ಮಾರುಕಟ್ಟೆ ಅಮೇರಿಕದಲ್ಲಿಯೇ ಅತ್ಯಂತ ದೊಡ್ಡದು, ಜಗತ್ತಿನಲ್ಲಿ ಎರಡನೇ ಸ್ಥಾನ ಹೊಂದಿದೆ ಜಪಾನ್ ದೇಶದ ರಾಜಧಾನಿ ಟೋಕಿಯೋ ನಗರದಲ್ಲಿರುವ ಶೇರು ಮಾರುಕಟ್ಟೆ ಪ್ರಪಂಚದಲ್ಲಿಯೇ ಪ್ರಥಮ ಸ್ಥಾನ ಪಡೆದಿದೆ. ಅಕ್ಟೋಬರ್ 19, 1987. ಅಮೇರಿಕದ ಹಾಗೂ ಸಮಸ್ತ ಬಂಡವಾಳಶಾಹಿ ಜಗತ್ತಿನ ಇತಿಹಾಸದಲ್ಲಿಯೇ "ಕರಾಳ ಸೋಮವಾರ"! ಅಂದು ಒಂದೇ ದಿನದಲ್ಲಿ ವಾಲ್‌ಸ್ಟ್ರೀಟ್‌ನಲ್ಲಿ ಗಣನೀಯ ಪಾತ್ರವಹಿಸುತ್ತಿದ್ದ, 30 ಪ್ರಸಿದ್ಧ ಕೈಗಾರಿಕೆಗಳನ್ನು ಪ್ರತಿನಿಧಿಸುತ್ತಿದ್ದ ಡೌ ಜೋನ್ಸ್(DOW JONES) ಗುಂಪಿನ ಶೇರುಗಳ ಬೆಲೆ ಸೂಚಿ 500 ಅಂಶಗಳಷ್ಟು, ಶೇ. 22.5 ರಷ್ಟು ಕುಸಿದು ಬಿದ್ದು, 500 ಬಿಲಿಯ ಡಾಲರ್‌ಗಳಷ್ಟು ಅಪಾರ ನಷ್ಟ ಸಂಭವಿಸಿತು! ಡಾಲರ್ ಒಂದಕ್ಕೆ ರೂ. 13ರ ದರದಲ್ಲಿ ಈ ನಷ್ಟದ ಪ್ರಮಾಣ ರೂ. 6,50,000 ಕೋಟಿ ಅಂದರೆ, ಭಾರತದ ಏಳನೇ ಪಂಚ ವಾರ್ಷಿಕ ಯೋಜನೆಯ ಒಟ್ಟು ವೆಚ್ಚದ ಸುಮಾರು ಎರಡರಷ್ಟು! ಅಮೇರಿಕದ ಒಟ್ಟು ಅರ್ಥ ವ್ಯವಸ್ಥೆಯ ಮೌಲ್ಯ 3000 ಬಿಲಿಯ ಡಾಲರ್ ಎಂದು ಅಂದಾಜು ಮಾಡಲಾಗಿದ್ದು, ದಿ. 19-10-1987 ರಂದು ಸಂಭವಿಸಿದ 500 ಬಿಲಿಯ ಡಾಲರ್ ನಷ್ಟ ಎಂದರೆ ಅಮೇರಿಕದ ಒಟ್ಟು ಅರ್ಥ ವ್ಯವಸ್ಥೆಯ ಮೌಲ್ಯದ ಶೇ. 16.5 ರಷ್ಟು!

ಹಿಂದೆ ಇದೇ ಶೇರು ಮಾರುಕಟ್ಟೆಯಲ್ಲಿ ಮೊದಲ ಜಾಗತಿಕ ಯುದ್ಧದ ಪ್ರಾರಂಭದಲ್ಲಿ ದಿ. 12-12-1914 ರಂದು ಈ ಗುಂಪಿನ ಶೇರುಗಳ ಬೆಲೆ ಸೂಚಿ ಶೇ. 24.9 ರಷ್ಟು ಕುಸಿದಿತ್ತು. ನಂತರ ಜಾಗತಿಕ ಮಹಾನ್ ಆರ್ಥಿಕ ಮುಗ್ಗಟ್ಟು ಪ್ರಾರಂಭವಾದ ದಿನ 28-10-1928 ರಂದು ಈ ಶೇರುಗಳ ಬೆಲೆ ಸೂಚಿ ಶೇ. 12.8 ರಷ್ಟು ಇಳಿಮುಖವಾಗಿತ್ತು. ಕಳೆದ ಎರಡು ಸಂದರ್ಭಗಳಿಗೆ ಹೋಲಿಸಿದರೆ, ದಿ. 19-10-1987 ರಂದು ಸಂಭವಿಸಿದ ವಾಲ್‌ಸ್ಟ್ರೀಟ್ ಶೇರು ಮಾರುಕಟ್ಟೆಯ ಕುಸಿತ ಬಂಡವಾಳಶಾಹಿ ಜಗತ್ತಿನಲ್ಲಿ ಈ ಶತಮಾನದಲ್ಲಿಯೇ ಅತ್ಯಂತ ದುರಂತದಾಯಕವಾಗಿದೆ. ಬಂಡವಾಳಶಾಹಿ ಆರ್ಥಿಕ ಮುಗ್ಗಟ್ಟಿಗೆ ಮುಗ್ಗರಿಸುತ್ತಿರುವ ಸ್ಪಷ್ಟಸೂಚನೆಯಾಗಿದೆ.

## ಜಾಗತಿಕ ಶೇರು ಮಾರುಕಟ್ಟೆಗಳ ಕುಸಿತ

ವಾಲ್‌ಸ್ಟ್ರೀಟ್ ದುರಂತದ ದಿನ, ಮರುದಿನ ಇತರ ಪ್ರಮುಖ ಬಂಡವಾಳಶಾಹಿ ದೇಶಗಳ ಶೇರು ಮಾರುಕಟ್ಟೆಗಳಲ್ಲಿಯೂ ಶೇರುಗಳ ಬೆಲೆಗಳು ತೀವ್ರ ಇಳಿಮುಖಲಾರಂಭಿಸಿ, ಅಪಾರ ನಷ್ಟಗಳು ಸಂಭವಿಸಿದವು. ಹೊಂಗ್‌ಕಾಂಗ್ ಶೇರು ಮಾರುಕಟ್ಟೆ ಒಂದುವಾರ ಮುಚ್ಚಲ್ಪಟ್ಟಿತು. ಲಂಡನ್, ಟೋಕಿಯೋ, ಪೇರಿಸ್, ಬೋನ್, ರೋಮ್, ಸಿಡ್ನಿ ಪ್ರಮುಖ ಶೇರು ಮಾರುಕಟ್ಟೆಗಳು ವಾಲ್‌ಸ್ಟ್ರೀಟ್ ದುರಂತದ ನಂತರ ಸುಮಾರು ಒಂದು ವಾರ ಕಾಲ ಅರೆ ಮುಚ್ಚಿದ್ದವು. ಲಂಡನ್ ಶೇರುಗಳ ಮಾರುಕಟ್ಟೆಯಲ್ಲಿ ಫೈನಾನ್ಸಿಯಲ್ ಟೈಮ್ಸ್ ಪ್ರಕಟಿಸುತ್ತಿರುವ 100 ಪ್ರಮುಖ ಶೇರುಗಳ ಬೆಲೆ ಸೂಚಿಯು ಶೇ. 20.7 ರಷ್ಟು ಕುಸಿದು ಬಿದ್ದು ಬಿಲಿಯ ಪೌಂಡುಗಳಷ್ಟು ನಷ್ಟವಾಯಿತು.

ಪೌಂಡ್ ಒಂದಕ್ಕೆ ಕನಿಷ್ಟ ರೂ. 20 ರ ದರದಂತೆ, 50 ಬಿಲಿಯ ಪೌಂಡ್‌ಗಳ ನಷ್ಟ ಎಂದರೆ ರೂ. 1,00,000 ಕೋಟಿ! ಈ ನಷ್ಟದ ಮೊತ್ತ ಭಾರತದ 15 ಶೇರು ಮಾರುಕಟ್ಟೆಗಳಲ್ಲಿ ದಾಖಲುಗೊಂಡ ಶೇರುಗಳ ಒಟ್ಟು ಮೌಲ್ಯಕ್ಕಿಂತಲೂ ಹೆಚ್ಚು. ಮುಂಬಯಿ ಶೇರು ಮಾರುಕಟ್ಟೆಯಲ್ಲಿ ದಾಖಲಾದ ಒಟ್ಟು ಶೇರುಗಳ ಮೌಲ್ಯ ರೂ. 25,000 ಕೋಟಿ, ಲಂಡನ್ ಮಾರುಕಟ್ಟೆಯಲ್ಲಿ 1–2 ದಿನಗಳಲ್ಲಿ ಸಂಭವಿಸಿದ ನಷ್ಟದ ಮೊತ್ತ ಇದರ ನಾಲ್ಕರಷ್ಟು!

ಟೋಕಿಯೋ ಶೇರು ಮಾರುಕಟ್ಟೆಯಲ್ಲಿ ಮಹತ್ವದ ಪಾತ್ರವಹಿಸುತ್ತಿರುವ 225 ಪ್ರಮುಖ ಶೇರುಗಳನ್ನು ಪ್ರತಿನಿಧಿಸುವ ನಿಕ್ಕಿ [NIKKI]ಗುಂಪಿನ ಶೇರುಗಳ ಬೆಲೆ ಸೂಚಿ ಶೇ. 15 ರಷ್ಟು ಕುಸಿಯಿತು. ಸಿಡ್ನಿ ಶೇರು ಮಾರುಕಟ್ಟೆಯ ಶೇರುಗಳ ಬೆಲೆ ಸೂಚಿ ಶೇ. 25 ರಷ್ಟು ಕುಸಿಯಿತು. ಬಂಡವಾಳಶಾಹಿ ಜಗತ್ತಿನಾದ್ಯಂತ ಹಾಹಾಕಾರ. ಗಾಬರಿ, ಭಯ, ಭೀತಿ ಯಾಕೆ? 1925 ರಂತಹ ಭೀಕರ ಆರ್ಥಿಕ ಮುಗ್ಗಟ್ಟು ಮರುಕಳಿಸುವುದೆಂದು! ತೋರಿಕೆಗೆ, ಅಧ್ಯಕ್ಷ ರೀಗನ್ ಅಮೇರಿಕ ಆರ್ಥಿಕ ವ್ಯವಸ್ಥೆ ಸರಿಯಾಗಿಯೇ ಇದೆ, ಶೇರು ಮಾರುಕಟ್ಟೆಯ ಕುಸಿತ ಯಾಕಾಯಿತೋ ತಿಳಿಯದು ಎನ್ನುತ್ತಾರೆ. ಆದರೆ, ಅವರ ಅರ್ಥ ಮಂತ್ರಿ ಜೇಮ್ಸ್ ಬೇಕರ್ ಅವರನ್ನು ಯೂರೋಪ್ ಪ್ರವಾಸ ಮೊಟಕುಗೊಳಿಸಿ ಸ್ವದೇಶಕ್ಕೆ ಧಾವಿಸುವಂತೆ ಆದೇಶಿಸಿದ್ದಾರೆ.

ಈ ಮಧ್ಯೆ, ಶೇರು ಮಾರುಕಟ್ಟೆಯ ಕುಸಿತವನ್ನು ತಡೆಗಟ್ಟಲು ಬಂಡವಾಳಶಾಹಿ ದೇಶಗಳ ಸರಕಾರಗಳು ತಮ್ಮ ಕೇಂದ್ರ ಬ್ಯಾಂಕುಗಳಿಗೆ, ವಾಣಿಜ್ಯ ಬ್ಯಾಂಕುಗಳಿಗೆ, ವಿಮಾಕಂಪನಿಗಳಿಗೆ, ಹಣಕಾಸು ಸಂಸ್ಥೆಗಳಿಗೆ ಅಧಿಕ ಪ್ರಮಾಣದಲ್ಲಿ ಶೇರುಗಳನ್ನು ಖರೀದಿಸಲು ಆದೇಶ ನೀಡುತ್ತಿದೆ. ಆದರೂ ಜಗತ್ತಿನ ಎಲ್ಲಾ ಪ್ರಮುಖ ಶೇರು ಮಾರುಕಟ್ಟೆಗಳಲ್ಲಿ ಶೇರುಗಳ ಬೆಲೆಗಳು ಅನಿಯಂತ್ರಿತವಾಗಿ ಕುಸಿಯುತ್ತಿವೆ. ಜನರು ಶೇರುಗಳ ಮೇಲಿನ ವಿಶ್ವಾಸ ಕಳೆದುಕೊಳ್ಳುತ್ತಿದ್ದಾರೆ. ಪ್ರಮುಖ ಬಂಡವಾಳಶಾಹಿ ದೇಶಗಳ ಅರ್ಥ ಮಂತ್ರಿಗಳ ತುರ್ತು ಸಭೆ ಕರೆಯಲಾಗಿದೆ. ಬ್ರಿಟಿಷ್, ಜರ್ಮನ್, ಜಪಾನ್ ಅರ್ಥಮಂತ್ರಿಗಳು ಅಮೇರಿಕದ ಆರ್ಥಿಕ ನೀತಿಯನ್ನು ಕಟುವಾಗಿ ಟೀಕಿಸುತ್ತಿದ್ದಾರೆ. ಸದ್ಯದ ದುಃಸ್ಥಿತಿಗೆ ರೀಗನ್‌ರ ಆರ್ಥಿಕ ನೀತಿಯೇ ಕಾರಣ ಎಂದು ಆಪಾದಿಸುತ್ತಾರೆ.

## ಡಾಲರ್ ಬೆಲೆ ಕುಸಿತ

ಶೇರು ಮಾರುಕಟ್ಟೆಯ ದುಃಸ್ಥಿತಿಯನ್ನು ಎದುರಿಸಲು ಪ್ರಯತ್ನಿಸುತ್ತಿದ್ದಂತೆಯೆ, ಅಮೇರಿಕದ ಡಾಲರ್ ಎಲ್ಲೆಡೆಗಳಲ್ಲಿಯೂ ತನ್ನ ಅಂತರಾಷ್ಟ್ರೀಯ ವಿನಿಮಯ ಮೌಲ್ಯವನ್ನು ಕಳೆದುಕೊಳ್ಳುತ್ತಿದೆ. ಉದಾಹರಣೆಗೆ ದಿ. 19-10-87ರ ವಾಲ್‌ಸ್ಟ್ರೀಟ್ ದುರಂತದ ನಂತರ ಡಾಲರ್ ಬೆಲೆ ಜಪಾನಿನ ಯೆನ್‌ಗಳಲ್ಲಿ ಇಳಿಮುಖವಾಗುತ್ತಾ ದಿ. 28-10-87 ರಂದು 138.50ಕ್ಕೆ ಕುಸಿದು, ದಿ.5-11-87 ಮತ್ತು 6-11-87 ರಂದು 135.35 ಹಾಗೂ 134.40ಕ್ಕೆ ಇಳಿಯಿತು. ದಿ. 23-2-87 ರಂದು ಡಾಲರ್ ಒಂದರ ಬೆಲೆ 153.67 ಯೆನ್ ಗಳಷ್ಟಾಗಿತ್ತು. ಕಳೆದ 40 ವರ್ಷಗಳಲ್ಲಿ ಪ್ರಥಮಬಾರಿಗೆ ಡಾಲರ್‌ನ ಬೆಲೆ 136 ಯೆನ್‌ಗಳ ಕನಿಷ್ಟ ಮಟ್ಟಕ್ಕಿಂತಲೂ ಮೀರಿ ಕುಸಿಯಿತು. ಜಪಾನ್ ಕೇಂದ್ರ ಬ್ಯಾಂಕು ಮಿಲಿಯಗಟ್ಟಲೆ ಡಾಲರ್ ಖರೀದಿಸಲು ಮುಂದಾದರೂ, ಕುಸಿದು ಬೀಳುತ್ತಿರುವ ಡಾಲರಿಗೆ ಜೀವದಾನ ನೀಡಲಿಕ್ಕಾಗಲಿಲ್ಲ. ಹೆಚ್ಚು ಕಡಿಮೆ ಇದೇ ತೀವ್ರಗತಿಯಲ್ಲಿ ಇಂಗ್ಲೆಂಡಿನ ಪೌಂಡ್ ಪ.ಜರ್ಮನಿಯ ಡಿ'ಮಾರ್ಕ್ ಮತ್ತು ಇತರ ದೇಶಗಳ ನಾಣ್ಯಗಳ ದರಗಳಲ್ಲಿ ಡಾಲರ್ ತನ್ನ ಬೆಲೆಯನ್ನು ತೀವ್ರಗತಿಯಲ್ಲಿ ಕಳೆದುಕೊಳ್ಳುತ್ತಿದೆ.

## ರೀಗನ್ ಆರ್ಥಿಕ ಧೋರಣೆಯ ದಿವಾಳಿಕೋರತನ

1980ರ ದಶಕದ ಪ್ರಾರಂಭದಲ್ಲಿ ಅಧಿಕಾರಕ್ಕೆ ಬಂದ ಅಮೇರಿಕದ ಅಧ್ಯಕ್ಷ ರೇಗನ್ 'ಕಡಿಮೆ ತೆರಿಗೆ' ಮತ್ತು 'ಅಧಿಕ ರಕ್ಷಣ ವೆಚ್ಚ' ಎಂಬ ಎರಡು ಪ್ರಮುಖ ಕ್ರಮಗಳಿಂದ ಆ ದೇಶದಲ್ಲಿ ಉದ್ಯೋಗ, ಉತ್ಪಾದನೆ ಹಾಗೂ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲಿರುವ ಒಬ್ಬ ಪ್ರವಾದಿ ಎಂದು ಬಂಡವಾಳಶಾಹಿ ಜಗತ್ತಿನಲ್ಲೆಲ್ಲಾ ಅವರನ್ನು ಕೊಂಡಾಡಲಾಯಿತು. ಉತ್ಪಾದನೆಗೇ ಪೂರ್ಣಪ್ರಾಶಸ್ತ್ಯನೀಡುವ ಈಧೋರಣೆ 'ರೀಗನೋಮಿಕ್ಸ್' (ರೀಗನ್ ಅರ್ಥ ಶಾಸ್ತ್ರ) ಎಂದು ಪ್ರಸಿದ್ಧವಾಯಿತು. ಇಂಗ್ಲೆಂಡಿನ ಪ್ರಧಾನಿ ಮಾರ್ಗರೆಟ್ ಥ್ಯಾಚರ್, ಭಾರತದ ಪ್ರಧಾನಿ ರಾಜೀವ್‌ಗಾಂಧಿ ರೀಗನ್ ಅರ್ಥಶಾಸ್ತ್ರದ ಬೆಂಬಲಿಗರಾಗಿ ತಮ್ಮ ದೇಶಗಳಲ್ಲಿಯೂ ಆ ಧೋರಣೆಯನ್ನು ಅನುಸರಿಸಲಾರಂಭಿಸಿದರು. ಹೆಚ್ಚುಕಡಿಮೆ ಈ ಕಾಲಾವಧಿಯಲ್ಲಿಇತರ ಬಂಡವಾಳಶಾಹಿದೇಶಗಳೂ ಇದೇ ಮಾರ್ಗ ಹಿಡಿದವು ಪರಿಣಾಮ?.

ಅಧಿಕ ಉತ್ಪಾದನೆಗೆ ಶಸ್ತ್ರಾಸ್ತ್ರಗಳ ಹಾಗೂ ಶ್ರೀಮಂತರ ಸುಖಭೋಗದ ಸಾಮಗ್ರಿಗಳ ಉತ್ಪಾದನೆ ಅನಿಶ್ಚಿತ ಸಂಕುಚಿತ ಆಂತರಿಕ ಹಾಗೂ ಅಂತರರಾಷ್ಟ್ರೀಯ ಮಾರುಕಟ್ಟೆ. ಅದರ ಹಂಚಿಕೆಗಾಗಿ ಬಂಡವಾಳಶಾಹಿ ದೇಶಗಳೊಳಗೆ ತೀವ್ರ ಪೈಪೋಟಿ ಅಮೇರಿಕ ತನ್ನ ಪ್ರಬಲ ಪ್ರತಿಸ್ಪರ್ಧಿಗಳಾದ ಪ.ಜರ್ಮನಿ ಮತ್ತು ಜಪಾನ್ ದೇಶಗಳ ಪೈಪೋಟಿಯನ್ನೆದುರಿಸಲು ಕೃತಕ ಕ್ರಮಗಳಿಂದ ಬಡ್ಡಿದರ,ಮತ್ತು ಶೇರುಗಳ ದರ ಏರಿಕೆಗಳಿಂದ ತನ್ನ ಆರ್ಥಿಕ ವ್ಯವಸ್ಥೆಯಸ್ಥಿರತೆ ಹಾಗೂ ಉತ್ಕರ್ಷತೆ (Boom)ಯನ್ನು ಕಾಪಾಡಿಕೊಂಡು ಬರಲು ಪ್ರಯತ್ನಿಸುತ್ತಾ ಬಂದಿತು. ತನ್ನ ಆರ್ಥಿಕ ಧೋರಣೆಗೆ, ವ್ಯವಸ್ಥೆಗೆ ಇತರ ಬಂಡವಾಳಶಾಹಿ ದೇಶಗಳು ಮಣಿಯಬೇಕೆಂದು ಒತ್ತಾಯಿಸತೊಡಗಿತು. ಪರಿಣಾಮವಾಗಿ ಅಮೇರಿಕದಲ್ಲಿ ನಿರುದ್ಯೋಗ ಹೆಚ್ಚೇಆಯಿತು. ಆರ್ಥಿಕ ಅಸಮಾನತೆ ಅಗಾಧವಾಯಿತು. ಒಂದೆಡೆ 20 ಮಿಲಿಯ (2 ಕೋಟಿ) ಜನರು ಹಸಿವಿನಿಂದ ಬಳಲುತ್ತಿದ್ದರೆ ಇನ್ನೊಂದೆಡೆ 400 ಜನರ ಅಗರ್ಭ ಶ್ರೀಮಂತರ ಒಟ್ಟು ಆಸ್ತಿ ಮೌಲ್ಯ 220 ಬಿಲಿಯಂ ಡಾಲರ್‌ಗಳಿಗೂ ಮೀರಿತು. (ರೂ.2,86.00 ಕೋಟಿ!) ಶಾಂತಿಕಾಲದಲ್ಲಿಯೇ ಅತ್ಯಂತ ಬೃಹತ್ ಪ್ರಮಾಣದ 2000 ಬಿಲಿಯ ಡಾಲರ್ ಮೊತ್ತದ [ರೂ. 26, 00, 000 ಕೋಟಿ!] ರಕ್ಷಣಾ ಸೌಧ ಬೆಳೆಯಿತು. ಈ ಬೃಹತ್ ಪ್ರಮಾಣದ ರಕ್ಷಣಾ ವ್ಯವಸ್ಥೆಯಲ್ಲಿ ಸಧ್ಯ ಯುದ್ಧ ಸಂಭವಿಸಿದರೆ ಅತ್ಯಗತ್ಯವಾದ ಸಾಂಪ್ರದಾಯಿಕ ಶಸ್ತ್ರಾಸ್ತ್ರಗಳುಕಡಿಮೆಯಾಗಿವೆಎಂದು ಅನಗತ್ಯದ'ತಾರಾ ಸಮರದ' ತಯಾರಿಕೆಯ ಜಾಲವೇ ಹೆಚ್ಚಾಗಿದೆ 'ಎಂದೂ ಅಮೇರಿಕದ ಕೆಲವು ಮಿಲಿಟರಿತಜ್ಞರು ಟೀಕಿಸಿದ್ದಾರೆ. ಭಾರೀ ಪ್ರಮಾಣದ ರಕ್ಷಣಾ ವೆಚ್ಚವು 2370 ಬಿಲಿಯಂ ಡಾಲರ್ ಮೊತ್ತದ (ರೂ.30,81,000 ಕೋಟಿ!) ರಾಷ್ಟ್ರೀಯ ಋಣ ಭಾರಕ್ಕೆ ಕಾರಣವಾಯಿತು. ವಾರ್ಷಿಕ ಮುಂಗಡ ಪತ್ರದ ಕೊರತೆಯು ಏರುತ್ತಲೇ ಇದ್ದು 1986 ರಲ್ಲಿ 221 ಬಿಲಿಯ ಡಾಲರ್‌ಗಳ ಗರಿಷ್ಠ ಮಟ್ಟಕ್ಕೇರಿತು. (ರೂ2,87,300ಕೋಟಿ!) ಈ ಕೊರತೆಯಲ್ಲಿ ರಾಷ್ಟ್ರೀಯಸಾಲದ ಮೇಲಿನ ಬಡ್ಡಿ ಖರ್ಚಿನ ಭಾಗವೂ ಗಣನೀಯ ಪ್ರಮಾಣದಲ್ಲಿದೆ. ಅಮೇರಿಕದ ವಿದೇಶಿ ವ್ಯಾಪಾರದಲ್ಲಿನ ಕೊರತೆ(ರಫ್ತುಗಳಿಕೆಗಿಂತ ಆಮದು ಖರ್ಚು ಹೆಚ್ಚು) ತಿಂಗಳಿಗೆ 170 ಬಿಲಿಯ ಡಾಲರ್ ದರದಲ್ಲಿ ಹೆಚ್ಚುತ್ತಿದೆ. [ರೂ.2,21,000 ಕೋಟಿ!] ಜೊತೆಗೆ ಬೆಲೆ ಏರಿಕೆ, ಹಣದುಬ್ಬರವೂ ಹೆಚ್ಚುತ್ತಿದೆ. ರೀಗನ್‌ರ ಆರ್ಥಿಕ ಧೋರಣೆ ಅಮೇರಿಕದ ಬಂಡವಾಳಶಾಹಿ ವ್ಯವಸ್ಥೆಯನ್ನು ಗರಿಷ್ಠ ಮಟ್ಟದ ಆರ್ಥಿಕ ವಿಷವರ್ತುಲಕ್ಕೆ ಕೆಡವಿದೆ, ಜಾಗತಿಕ ಆರ್ಥಿಕ ಮುಗ್ಗಟ್ಟು ಮರುಕಳಿಸುವಂತೆ ಮಾಡಿದೆ.

ಬಂಡವಾಳಶಾಹಿ ವ್ಯವಸ್ಥೆಯ ರಕ್ಷಕನಾಗಿ ಪ್ರವಾದಿಯಾಗಿ ಅಧಿಕಾರಕ್ಕೆ ಬಂದ ರೀಗನ್ ಇಂದು ಅದರ ವಿನಾಶಕನಾಗಿ,ಯಮದೂತನಾಗಿ, ಮೃತ್ಯುಪ್ರಾಯನಾಗಿ ಕಾಣುತ್ತಿದ್ದಾನೆ! ಜಗತ್ತಿನಾದ್ಯಂತ ರೀಗನ್ ಆರ್ಥಿಕ ಧೋರಣೆಯ ದಿವಾಳಿ ಕೋರತನವನ್ನು ಬಹಿರಂಗವಾಗಿ ಟೀಕಿಸಲಾಗುತ್ತದೆ. ರೀಗನ್‌ ತನ್ನ ಅಧ್ಯಕ್ಷ ಪದವಿಯ ಎರಡನೇ ಅವಧಿ 1988ಕ್ಕೆ ಮುಗಿಯುವವರೆಗೆ ಹೇಗಾದರೂ ಮಾಡಿ ಆರ್ಥಿಕ ವಿಷವರ್ತುಲ ಆಸ್ಫೋಟಗೊಳ್ಳದಂತೆ ಪ್ರಯತ್ನಿಸುತ್ತಾ ಬಂದರು. 'ತೆರಿಗೆರಿಯಾಯಿತಿ' ಮತ್ತು ರಕ್ಷಣಾ ವೆಚ್ಚ ಹೆಚ್ಚಳದ ಆಸೆಆಮಿಷಗಳಿಂದ ಕೈಗಾರಿಕಾವಲಯಗಳಲ್ಲಿ ಇನ್ನಷ್ಟು ಅಧಿಕ ಲಾಭದಭ್ರಮೆ ಹುಟ್ಟಿಸಿ ಶೇರು ಮಾರುಕಟ್ಟೆಗಳಲ್ಲಿ ಶೇರುಗಳ ಬೆಲೆಗಳು ಏರುತ್ತಿರುವಂತೆ ಪ್ರಚೋದಿಸುತ್ತಾ ಬಂದರು. ಶೇರುಗಳ ಬೆಲೆಗಳು ಕೈಗಾರಿಕಾ ಉತ್ಪಾದನೆ,

(5ನೇ ಪುಟ ನೋಡಿ)

### ಎರಡು ವ್ಯವಸ್ಥೆ ಎರಡು ದಾರಿ

1929–33ರ ಅವಧಿಯಲ್ಲಿ ಬಂಡವಾಳಶಾಹಿ ದೇಶಗಳು ಜಾಗತಿಕ ಮಹಾನ್ ಆರ್ಥಿಕ ಮುಗ್ಗಟ್ಟಿನಲ್ಲಿ ಮುಗ್ಗರಿಸುತ್ತಿದ್ದಾಗ, 1917 ರ ಅಕ್ಟೋಬರ್ ಕ್ರಾಂತಿಯ ನಂತರದ ಸಮಾಜವಾದಿ ಸೋವಿಯೆತ್ ರಷ್ಯ ತನ್ನ ಮೊದಲ ಪಂಚವಾರ್ಷಿಕ ಯೋಜನೆಯಿಂದ (1929–32) ಅದ್ಭುತ ಪ್ರಗತಿ, ಸಮೃದ್ಧಿ ಸಾಧಿಸಿತು. 1987ರಲ್ಲಿ ಅಮೇರಿಕವೂ ಸೇರಿದಂತೆ ಬಂಡವಾಳಶಾಹಿ ದೇಶಗಳು 1929 ರಂತಹ ಜಾಗತಿಕ ಮಹಾನ್, ಆರ್ಥಿಕ ಮುಗ್ಗಟ್ಟಿನ ಮರುಕಳಿಕೆಯ ಭಯದಲ್ಲಿರುವಾಗ, ಸೋವಿಯೆತ್ ರಷ್ಯಾ ತನ್ನ ಹನ್ನೆರಡನ್ನೇ ಪಂಚವಾರ್ಷಿಕ ಯೋಜನೆಯ ಗಣನೀಯ ಪ್ರಗತಿ, ಸಮೃದ್ಧಿ ಅನುಭವಿಸುತ್ತಿದೆ. ಸಮಾಜವಾದದಿಂದ ಸಮತಾವಾದದ ಸಮೃದ್ಧಿ ಸಮಾಜದತ್ತ ದಾಪುಗಾಲು ಹಾಕುತ್ತಿದೆ. ಜಗತ್ತಿನಮೂರನೇ ಒಂದರಷ್ಟು ಜನತೆ–ರಷ್ಯಾ, ಚೀನಾ, ವಿಯಟ್ನಾಂ, ಕ್ಯೂಬಾ, ಉ.ಕೊರಿಯಾ, ಪೂ. ಯೂರೋಪ್ ಇತ್ಯಾದಿ ದೇಶಗಳೂ ಸೇರಿದಂತೆ ಸಮಾಜವಾದಿ ಮಾರ್ಗ ಅನುಸರಿಸುತ್ತಿದ್ದು ಸುಖ–ಶಾಂತಿ ಸಂಪತ್ತು ಸಮೃದ್ಧಿ ಅನುಭವಿಸುತ್ತಿವೆ. ಅಕ್ಟೋಬರ್ ಕ್ರಾಂತಿಯ 70ನೇ ವಾರ್ಷಿಕೋತ್ಸವವನ್ನು ಸಮಾಜವಾದಿ ದೇಶಗಳಲ್ಲಿಯೇ ಅಲ್ಲದೆ, ಜಗತ್ತಿನಾದ್ಯಂತ ಆಚರಿಸಲಾಗುತ್ತಿದೆ. ಬಂಡವಾಳಶಾಹಿ ವ್ಯವಸ್ಥೆಯ ಅವಸಾನ ಸಮೀಪಿಸುತ್ತಿದೆ. ಸಮಾಜವಾದವು ಜಗತ್ತಿನಾದ್ಯಂತ ಸ್ಥಾಪಿತವಾಗಲಿದೆ.

ಮಾರುಕಟ್ಟೆ, ಲಾಭಗಳಿಕೆಯ ವಾಸ್ತವಿಕತೆಗಿಂತ ಬಹಳ ದೂರ ಸರಿದವು. ಒಂದು ಹಂತದಲ್ಲಿ ದಿ. 19.10.87 ವಾಲ್‌ಸ್ಟ್ರೀಟ್‌ನಲ್ಲಿ ಕೃತಕಸಮೃದ್ಧಿಯ ಬುಗ್ಗೆಯು ಸ್ಫೋಟಗೊಂಡು ಶೇರುಗಳ ಬೆಲೆಗಳು ನೆಲಕಚ್ಚಿದವು! ಬಿಲಿಯಾಂತರ ಡಾಲರ್‌ಗಳಷ್ಟು ನಷ್ಟ ಸಂಭವಿಸಿತು. ಇನ್ನೊಂದೆಡೆ ವಿದೇಶಿ ವ್ಯಾಪಾರದಲ್ಲಿ ಕೊರತೆ ನೀಗಿಸಲು, ಪ. ಯುರೋಪ್ ಮತ್ತು ಜಪಾನ್ ದೇಶಗಳ ಪೈಪೋಟಿಯನ್ನೆದುರಿಸಿ ರಫ್ತುಗಳಿಗೆ ಹೆಚ್ಚಿಸಲು ಅಸಮರ್ಥವಾದ ರೀಗನ್ ಸರಕಾರ, ಆಂತರಿಕ ಅಧಿಕ ಬಡ್ಡಿಯ ಧೋರಣೆಯಿಂದ ವಿದೇಶಿ ಬಂಡವಾಳವನ್ನು ತಾತ್ಕಾಲಿಕವಾಗಿ ಆಕರ್ಷಿಸುತ್ತಾ ತನ್ನ ಡಾಲರಿನ ವಿನಿಮಯ ದರವನ್ನು ರಕ್ಷಿಸುತ್ತಾ ಬಂದಿತು. ಆದರೆ ವಾಲ್‌ಸ್ಟ್ರೀಟ್‌ದುರಂತದ ನಂತರ ಇಂತಹ ತಾತ್ಕಾಲಿಕ ವಿದೇಶಿ ಬಂಡವಾಳ ಅಮೇರಿಕದ ಗಡಿದಾಟಿ ಪುನ: ಪ. ಯುರೋಪ ಜಪಾನ್ ಮತ್ತಿತರ ದೇಶಗಳಿಗೇ ರವಾನೆ [CAPITAL FTIGHT] ಹೋಗಲಾರಂಭವಾಯಿತು. ಆಗ ಡಾಲರ್ ಬೆಲೆ ಕುಸಿದು ನೆಲ ಕಚ್ಚಿತು!

## ದುಃಸ್ಥಿತಿಯ ಮುನ್ನೆಚ್ಚರಿಕೆ

ಅಮೇರಿಕ ತನ್ನ ಶೇರು ಮಾರುಕಟ್ಟೆಯ ಮತ್ತು ಡಾಲರ್ ವಿನಿಮಯ ದರದ ದುಃಸ್ಥಿತಿಯನ್ನು ಹೋಗಲಾಡಿಸಲು ತನ್ನ ಪ್ರತಿಸ್ಪರ್ಧಿಗಳಿಗೆ ಮುಖ್ಯವಾಗಿ ಪ. ಜರ್ಮನಿ ಹಾಗೂ ಜಪಾನ್ ದೇಶಗಳಿಗೆ ಅಲ್ಲಿನ ಬಡ್ಡಿ ದರ ಕಡಿಮೆ ಮಾಡಲು ಮತ್ತು ಅಮೇರಿಕದಿಂದ ಆಮದು ಹೆಚ್ಚಿಸಿಕೊಳ್ಳಲು ಒತ್ತಾಯಿಸುತ್ತಿದೆ. ಆದರೆ, ತಮ್ಮ ದೇಶಗಳ ಆರ್ಥಿಕ ಸ್ಥಿರತೆಯನ್ನುಳಿಸಿಕೊಳ್ಳಲು ಪ. ಜರ್ಮನಿ ಮತ್ತು ಜಪಾನ್ ತಮ್ಮ ಬಡ್ಡಿ ದರಗಳನ್ನು ಕಡಿಮೆ ಮಾಡಲು ಸಿದ್ಧವಿಲ್ಲ. ತಂತ್ರಜ್ಞಾನದಲ್ಲಿ ಹಿಂದುಳಿದ ಮತ್ತು ಅಧಿಕ ಬೆಲೆಯ ಅಮೇರಿಕಾದ ಸಾಮಗ್ರಿಗಳನ್ನು ಆಮದು ಮಾಡಿಕೊಳ್ಳಲೂ ಒಪ್ಪುವುದಿಲ್ಲ. ಬದಲು, ಡಾಲರ್ ಬೆಲೆ ಮತ್ತು ಶೇರುಗಳ ಬೆಲೆ ಸ್ಥಿರತೆ ಕಾಪಾಡಿಕೊಳ್ಳಲು ಅಮೇರಿಕಾವೇ ತನ್ನ ಆಂತರಿಕ ಕೊರತೆಯನ್ನು, ವಿದೇಶಿ ವ್ಯಾಪಾರದ ಕೊರತೆಯನ್ನು ಕಡಿತ ಗೊಳಿಸಲು ಕಠಿಣ ಕ್ರಮ ಕೈಗೊಳ್ಳುವಂತೆ ಈ ದೇಶಗಳು ಒತ್ತಾಯಿಸುತ್ತಿವೆ.

ಕಳೆದ ಕೆಲವು ವರ್ಷಗಳಿಂದ ಸಮಾಜವಾದಿ ಸೋವಿಯೆತ್ ರಷ್ಯದ ನೇತೃತ್ವದಲ್ಲಿನ ವಿಶ್ವಶಾಂತಿಯ ಹಾಗೂ ನಿಶಸ್ತ್ರೀಕರಣದ ಜಾಗತಿಕ ಆಂದೋಳನದಿಂದ ಯುದ್ಧ ಭೀತಿ ಕಡಿಮೆ ಆಗಿದೆ. ಪ. ಜರ್ಮನಿ ಸೋವಿಯೆತ್ ರಷ್ಯಾ ತನ್ನ ಮಿತ್ರರಾಷ್ಟ್ರ ಎಂದು ಪರಿಗಣಿಸಲು ಪ್ರಾರಂಭಿಸಿದೆ. ಹಾಗೆಯೆ ಇತರ ಯುರೋಪ್ ದೇಶಗಳೂ ರಷ್ಯಾ ದೊಂದಿಗೆ ತಮ್ಮ ಸಂಬಂಧ ಹೆಚ್ಚಿಸಿಕೊಳ್ಳುತ್ತಿವೆ. ಆದುದರಿಂದ, ಅಮೆರಿಕದ ಶಸ್ತ್ರಾಸ್ತ್ರಗಳಿಗೂ ಜಾಗತಿಕ ಮಾರುಕಟ್ಟೆ ಕಡಿಮೆಯಾಗುತ್ತಿದೆ. ಜಪಾನ್ ಅಮೇರಿಕದ ವಿರುದ್ಧ ಜಾಗತಿಕ ನಾಯಕತ್ವಕ್ಕೆ ಪೈಪೋಟಿ ನಡೆಸುತ್ತಿದೆ. ಅಮೇರಿಕದ ಆರ್ಥಿಕ, ರಾಜಕೀಯ, ಮಿಲಿಟರಿ ಧೋರಣೆಗಳು ಅರ್ಥ ಹೀನವಾಗುತ್ತಿವೆ. ಬಂಡವಾಳಶಾಹಿ ದೇಶಗಳೊಳಗಿನ ತೋರಿಕೆಯ ಆರ್ಥಿಕ ಸಹಕಾರ ಒಪ್ಪಂದಗಳು ಶಿಥಿಲವಾಗುತ್ತಿವೆ. ಸಧ್ಯದಲ್ಲಿಯೇ ಇನ್ನೊಂದು ಜಾಗತಿಕ ಮಹಾನ್ ಆರ್ಥಿಕ ಮುಗ್ಗಟ್ಟು ಮರಕುಳಿಸಲಿದೆ ಎಂದು ಅಮೇರಿಕದ ಹಾಗೂ ಜಗತ್ತಿನ ಪ್ರಸಿದ್ಧ ಅರ್ಥಶಾಸ್ತ್ರಜ್ಞರೂ ರಾಜಕೀಯ ತಜ್ಞರೂ ಮುನ್ನೆಚ್ಚರಿಕೆ ನೀಡುತ್ತಿದ್ದಾರೆ.

## ದುಃಸ್ಥಿತಿಯ ದುಷ್ಪರಿಣಾಮ

ಶೇರುಗಳ ಹಾಗೂ ಡಾಲರಿನ ಬೆಲೆ ಕುಸಿತದಿಂದಾಗಿ ಮಿಲಿಯಾಂತರ ಡಾಲರ್ ನಷ್ಟ ಉಂಟಾಗಿದೆ. ಶೇರುಗಳಲ್ಲಿ ಹಣ ತೊಡಗಿಸಿದ ಲಕ್ಷಾಂತರ ಪಿಂಚಣಿದಾರರು, ಮಧ್ಯಮ ವರ್ಗದವರು ಈ ಅಪಾರ ನಷ್ಟದ ಭಾರ ಅನುಭವಿಸಬೇಕಾಗಿದೆ. ಕೈಗಾರಿಕೋದ್ಯಮಗಳಲ್ಲಿ, ಆರ್ಥಿಕ ಅಭಿವೃದ್ಧಿಯಲ್ಲಿ ನಿರುತ್ಸಾಹಕ, ಚಿಂತಾಜನಕ ಪರಿಸ್ಥಿತಿಯಿಂದ ಎಲ್ಲಾ ಚಟುವಟಿಕೆಗಳು ಸ್ಥಗಿತ ಗೊಳ್ಳಲಿವೆ. ವ್ಯಾಪಕ ನಿರುದ್ಯೋಗ ಉಂಟಾಗಲಿದೆ. ಕಟ್ಟಡ ನಿರ್ಮಾಣದ ಕಾರ್ಯ ಈಗಾಗಲೇ ಸ್ಥಗಿತಗೊಂಡಿದೆ. ಮೋಟಾರ್ ವಾಹನಗಳ ಕೈಗಾರಿಕೆ ನಗರಕ್ಕೆ ಹೋಗಲಿವೆ! 65 ವರ್ಷಕ್ಕಿಂತ ಹೆಚ್ಚಿನ ಪ್ರಾಯದವರು, 1929ರ ಜಾಗತಿಕ ಮಹಾನ್ ಆರ್ಥಿಕ ಮುಗ್ಗಟ್ಟಿನ ಭೀಕರತೆಯನ್ನು ನೆನೆಸಿಕೊಳ್ಳ ತೊಡಗಿದ್ದಾರೆ. (ನ್ಯೂ ಮಾರ್ಕ್, ರ್‍ಯಾಟರ್ ವರದಿ: 1-11-87) ಅಮೇರಿಕದ ಮಾರುಕಟ್ಟೆಯನ್ನೇ ಅವಲಂಬಿಸಿರುವ ಇತರ ಬಂಡವಾಳಶಾಹಿ ದೇಶಗಳಲ್ಲಿಯೂ ಆರ್ಥಿಕ ಮುಗ್ಗಟ್ಟಿನ ದುಷ್ಪರಿಣಾಮ ಮರಕಳಿಸಲಿವೆ. ಮುಖ್ಯವಾಗಿ ಅಭಿವೃದ್ಧಿ ಹೊಂದುತ್ತಿರುವ ಮೂರನೆ ಜಗತ್ತಿನ ರಾಷ್ಟ್ರಗಳು ಭಾರತವೂ ಸೇರಿದಂತೆ ಅಮೇರಿಕದೊಂದಿಗಿನ ನರಪ್ತುಗಂಡಳು ಕುಸಿಯಲಿವೆ. ಅವುಗಳ ಸಾಲದ ಹೊರೆ ಇನ್ನಷ್ಟು ಹೆಚ್ಚಲಿದೆ.

ಅಮೇರಿಕ ತನ್ನ ಆರ್ಥಿಕ ದುಃಸ್ಥಿತಿಯನ್ನೆದುರಿಸಲು, ಶ್ರೀಮಂತರ ಆಸ್ತಿ ಆದಾಯಗಳ ಮೇಲೆ ತೆರಿಗೆ ಹೆಚ್ಚಿಸುವ ಕ್ರಮ ಕೈಗೊಂಡಿತೇ ? ರಕ್ಷಣಾ ವೆಚ್ಚ ಕಡಿತಗೊಳಿಸಿತೇ ? ಆಂತರಿಕ ಕೊರತೆ ಹಾಗೂ ವಿದೇಶಿ ವ್ಯಾಪಾರದ ಕೊರತೆ ನೀಗಿಸಲು ಸೂಕ್ತಕ್ರಮಕೈಗೊಂಡಿತೇ? ರೀಗನ್‌ರಿಗೆ ಇವುಗಳು ಬಿಲಿಯ ಡಾಲರುಗಳ ಪ್ರಶ್ನೆಗಳಾಗಿವೆ ! ಅಧ್ಯಕ್ಷ ರೀಗನ್‌ರ ಆರ್ಥಿಕ ಧೋರಣೆಯ ದಿವಾಳಿಕೋರತನದಿಂದ ಪ್ರಧಾನಿ ರಾಜೀವ್ ಗಾಂಧಿ ಪಾಠ ಕಲಿಯುವರೆ ?





# ದೂರದರ್ಶನ ಎಲ್ಲಾ-ಜನಾಂಗಗಳ ಪರಂಪರೆಗಳ ಬಿಂಬವಾಗಬೇಕು

**ಐಕ್ಯತೆಯೆಂದರೆ ವಿಪರೀತ ಕೇಂದ್ರೀಕರಣ ಇದು ಕಾಂಗ್ರೆಸ್(ಐ) ಸಮೀಕರಣ ತದ್ವಿರುದ್ಧವಾಗಿ ನಮ್ಮ ಬಹು ವಿದೇಶೀಯ, ಬಹುಭಾಷಾ ದೇಶದ ಐಕ್ಯತೆ ಎಲ್ಲಾ ಭಾಷಾ-ಜನಾಂಗಳಿಗೆ ಸಮಾನತೆ ದೊರಕದೆ ಸಾಧ್ಯವಿಲ್ಲಎಂದುಸಿ.ಪಿ.ಐ(ಎಂ)ಪ್ರತಿಪಾದಿಸುತ್ತಾ ಬಂದಿದೆ. ಇದೇದೂರದರ್ಶನದ ಕಾರ್ಯನಿರ್ವಹಣೆಗೂ ಅನ್ವಯಿಸುತ್ತದೆ. ಕಳೆದ ವರ್ಷ ಕಲ್ಕತ್ತೆಯಲ್ಲಿ ನಾಮೆಡಿಯಾದತ್ತಿ ನಡೆಸಿದ ವಿಚಾರ ಸಂಕಿರಣದಲ್ಲಿ ಕಾಂ. ಜ್ಯೋತಿಬಸು ಮಾಡಿದ ಭಾಷಣವೂ ಇದನ್ನೇ ಒತ್ತಿ ಹೇಳಿತ್ತು. ಅದರ ಸಂಗ್ರಹಾನುವಾದ ಇಲ್ಲಿದೆ.**

ಕಾಂ. ಜ್ಯೋತಿಬಸು

ದೂರದರ್ಶನ ಒಂದು ಭಾರತೀಯ ವ್ಯಕ್ತಿತ್ವವನ್ನು ಬಿಂಬಿಸುವ ಗುರಿಹೊಂದಿರಬೇಕು ಎಂದು ದೂರದರ್ಶನ ಕಾರ್ಯಕ್ರಮ ಕುರಿತಾದ ಸಮಿತಿ ಸರಿಯಾಗಿಯೇ ಹೇಳಿವೆ. ದುರದುಷ್ಟವಶಾತ್, ದೂರದರ್ಶನದ ಸಧ್ಯದ ಕಾರ್ಯಕ್ರಮಗಳು ನಮ್ಮ ಬಹುಪಾಲು ಜನತೆಯ ಜೀವನ ಕ್ರಮಗಳನ್ನು, ಆಕಾಂಕ್ಷೆಗಳನ್ನು ಬಿಂಬಿಸುವತ್ತ ಗಮನ ಹರಿಸುತ್ತಿಲ್ಲ. ನಗರದ ಉಚ್ಛವಿಭಾಗಗಳ ಅಗತ್ಯಗಳನ್ನು ಪೂರೈಸುವುದೇ ಅದರ ಪ್ರಮುಖ ಗುರಿಯಿದ್ದಂತೆ ಕಾಣಿಸುತ್ತಿದೆ. ಭಾರತದ ವಾಸ್ತವದ ಸ್ಥಿತಿಗತಿಗಳ ಉದ್ದೇಶಪೂರ್ವಕವಾದ ವಿಕೃತ ಚಿತ್ರಣ ದೂರದರ್ಶನ ಕಾರ್ಯಕ್ರಮ ತಯಾರಕರ ಬಗ್ಗೆ ಜನ ವಿಶ್ವಾಸ ಕಳಕೊಳ್ಳುವಂತೆ ಕೇಂದ್ರ ಸರ್ಕಾರಿ ಮತ್ತು ಸಂಪರ್ಕ ಯೋಜನಾಕಾರರು ಈ ಮಾಧ್ಯಮದ ಕುಂದು-ಕೊರತೆಗಳ ಆಳವಾದ ವಿಶ್ಲೇಷಣೆ ನಡೆಸಿ ವಿವಿಧ ಭಾಷೆಗಳನ್ನಾಡುವ ಜನರಿಗೆ ಅನುಕೂಲವಾದ ಒಂದು ಧೋರಣೆ ವಿಕಾಸಗೊಳ್ಳುವಲ್ಲಿ ನೆರವಾಗುವ ನಿಲುವು ತಳೆಯಬೇಕಾಗಿದೆ.

ಭಾರತೀಯ ದೂರದರ್ಶನದ ಒಂದು ಪ್ರಮುಖ ದೌರ್ಬಲ್ಯವೆಂದರೆ ಕಾರ್ಯಕ್ರಮಗಳನ್ನು ತಯಾರಿಸುವಲ್ಲಿ ಅದರ ವಿಪರೀತ ಕೇಂದ್ರಿಕೃತ ದೃಷ್ಟಿಕೋನ. ಭಾರತ ಬಹು-ಜನಾಂಗೀಯ, ಬಹು ಭಾಷಾ, ಬಹು-ಸಾಂಸ್ಕೃತಿಕ ಅಂಶಗಳನ್ನೊಳಗೊಂಡ ಒಂದು ಒಕ್ಕೂಟವೆಂಬುದನ್ನೇ ಸಂಬಂಧ ಪಟ್ಟ ಅಧಿಕಾರಿಗಳು ಮರೆತಂತೆ ಕಾಣುತ್ತದೆ. ದೂರದರ್ಶನ ಪ್ರಸಾರಣ ಸಮಯದ ಬಹುಪಾಲನ್ನು ಆವರಿಸಿರುವ ರಾಷ್ಟ್ರೀಯ ಕಾರ್ಯಕ್ರಮ ಒಂದು ರಾಷ್ಟ್ರೀಯ ಚಾರಿತ್ರ್ಯವನ್ನು ಇನ್ನೂ ಪಡೆದಿಲ್ಲ. ಅದು ನಮ್ಮ ರಾಷ್ಟ್ರೀಯ ವಿಕ್ಷಣತೆಗಳನ್ನು ಸರಿಯಾಗಿ ಬಿಂಬಿಸಬೇಕಾದರೆ ಬಹಳಷ್ಟು ಕಲ್ಪನಾಶೀಲತೆ ಹಾಗೂ ನಾವೀನ್ಯತೆ ಅಗತ್ಯ.

ಭಾರತೀಯ ಸ್ವಂತಿಕೆಯಿರುವುದು ಅದರ ವೈವಿಧ್ಯತೆಯಲ್ಲಿನ ಏಕತೆಯಲ್ಲಿ. ದೂರದರ್ಶನದಂತಹ ಪರಿಣಾಮಕಾರೀ ಮಾಧ್ಯಮದ ಮೂಲಕ ಈ ಸಂದೇಶ ತಲುಪುವಂತಾಗಬೇಕು. ವೈವಿಧ್ಯತೆಯಲ್ಲಿ ಐಕ್ಯತೆಯ ಅನಿವಾರ್ಯತೆಯನ್ನು ನಮ್ಮ ಜನತೆ ಹೆಚ್ಚು ಹೆಚ್ಚಾಗಿ ಅರಿತುಕೊಳ್ಳಲು ಉತ್ಸುಕರಾಗುವಂತೆ ತಂತಮ್ಮ ಸಾಮಾಜಿಕ. ಆರ್ಥಿಕ, ಭಾಷಾ ಹಾಗೂ ಸಾಂಸ್ಕೃತಿಕ ಅಗತ್ಯಗಳನ್ನು ಪೂರೈಸಿಕೊಳ್ಳಲು ಸಂಯೋಜಿತ ಪ್ರಯತ್ನ ಶೀಲರಾಗುವಂತೆ ಮಾಡಬೇಕು.

ದೂರದರ್ಶನ ಹೆಚ್ಚೆಚ್ಚು ಜನರನ್ನು ತಲುಪಲಾರಂಭಿಸಿದಂತೆ ಅದರ ಪಾತ್ರವೂ ಹೆಚ್ಚೆಚ್ಚು ಮಹತ್ವ ಗಳಿಸುತ್ತಾ ಹೋಗುತ್ತದೆ. ದೇಶದ ಎಲ್ಲಾ ಜನಾಂಗೀಯ, ಭಾಷಾ, ಹಾಗೂ ಸಾಂಸ್ಕೃತಿಕ ಗುಂಪುಗಳು ದೂರದರ್ಶನ ತಮ್ಮ ಪ್ರಾತಿನಿಧಿಕ ಮಾಧ್ಯಮ ಎಂದು ಭಾವಿಸುವಂತಾಗಬೇಕು. ಆದರೆ ಕೇಂದ್ರ ಸರಕಾರ ಈ ದಿಕ್ಕಿನಲ್ಲಿ ಯೋಚಿಸುತ್ತಿಲ್ಲ ಎಂಬುದು ಖೇದದ ಸಂಗತಿ. ಪಕ್ಷ ಪಾತ ಪೂರ್ಣ ನೀತಿ, ಅಧಿಕಾರಿಗಳು ಹಾಗೂ ಸಂಪನ್ಮೂಲದ ಕೇಂದ್ರೀಕರಣ, ವಿಕೇಂದ್ರಿಕರಿಸಲು ನಿರಾಕರಣೆಯಿಂದಾಗಿ ಕೇಂದ್ರ-ರಾಜ್ಯ ಸಂಬಂಧಗಳಲ್ಲಿ ಎದ್ದು ಕಾಣುವ ವಿಕೃತಿಗಳುಂಟಾಗುತ್ತವೆ, ಪ್ರತ್ಯೇಕತಾವಾದೀ ಶಕ್ತಿಗಳು ತಲೆಯೆತ್ತಲು ಈ ಸಂಗತಿಯತ್ತ ನಾನು ಕಳೆದ ಹಲವು ವರ್ಷಗಳಿಂದ ಕೇಂದ್ರ ಸರ್ಕಾರದ ಗಮನ ಸೆಳೆಯಲು ಪ್ರಯತ್ನಿಸಿದ್ದೇವೆ.

ರಾಷ್ಟ್ರೀಯ ಕಾರ್ಯಕ್ರಮವನ್ನು ದೂರದರ್ಶನದಲ್ಲಿ ಆರಂಭಿಸುವ ಮೊದಲು ಕೆಲವು ಮೂಲಭೂತ ಪ್ರಶ್ನೆಗಳನ್ನೂ ಪರಿಶೀಲಿಸಬೇಕಾಗಿತ್ತೆಂದು ಸಮಾಚಾರ ಮತ್ತು ಪ್ರಸಾರ ಮಂತ್ರಿಗಳಿಗೆ ನಾನು ಬರೆದಿದ್ದೆ. ಪ್ರಶ್ನೆಗಳು ಈಗಲೂ ಅಷ್ಟೇ ಪ್ರಸ್ತುತ.

ರಾಷ್ಟ್ರೀಯ ಕಾರ್ಯಕ್ರಮದ ಜೊತೆಗೆ ಹೆಚ್ಚೆಚ್ಚು ಪ್ರಾದೇಶಿಕ ಕಾರ್ಯಕ್ರಮಗಳನ್ನೂ ಆರಂಭಿಸುವುದು ಅತ್ಯಂತ ಸೂಕ್ತ. ಇದರಿಂದ ರಾಷ್ಟ್ರೀಯ ಸಮಗ್ರತೆಗೆ ಪ್ರೋತ್ಸಾಹ ನೀಡಿದಂತಾಗುತ್ತದೆ. ವಿವಿಧ ಸ್ಥಳೀಯ ದೂರದರ್ಶನ ಕೇಂದ್ರಗಳಿಗೆ ಸಂಬಂಧ ಪಟ್ಟ ಸಾಂಸ್ಕೃತಿಕ ಗುಂಪುಗಳ ಕಾರ್ಯಕ್ರಮ ಪ್ರಸಾರ ಮಾಡಲು ಸಾಕಷ್ಟು ಅವಕಾಶಗಳನ್ನು ಒದಗಿಸಬೇಕೆಂದೂ ಮಂತ್ರಿಗಳಿಗೆ ಸೂಚಿಸಿದ್ದೆ. ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಸ್ಥಳೀಯ ಕಾರ್ಯಕ್ರಮಗಳನ್ನು ಪ್ರಸಾರ ಮಾಡಿದಾಗಲೂ ಕೂಡಾ ಅದರಲ್ಲಿ ಸ್ಥಳೀಯ ಛಾಯೆ ಮತ್ತು ಸ್ಥಳೀಯ ಬಣ್ಣ ಸಾಮಾನ್ಯವಾಗಿ ಕಾಣಬರುತ್ತಿಲ್ಲ ಎಂಬ ದೂರುಗಳು ಬರುತ್ತಿವೆ.

ಪ್ರಾದೇಶಿಕ ಕೇಂದ್ರಗಳುಇತರ ರಾಜ್ಯ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸುವಂತೆಯೂ ಪ್ರೋತ್ಸಾಹ ನೀಡಬೇಕು. ಇದರಿಂದ ವಿವಿಧ ಭಾಷಾ ಗುಂಪುಗಳ ನಡುವೆ ಸಾಂಸ್ಕೃತಿಕ ಕೊಡುಗೆಗಳು ಸಾಧ್ಯವಾಗುತ್ತದೆ.

ನಮಗೆಲ್ಲಾ ತಿಳಿದಿರುವಂತೆ ಟಿ.ವಿ. ಒಂದುಮನರಂಜನಾ ಮಾಧ್ಯಮವಷ್ಟೇ ಅಲ್ಲ, ರಾಷ್ಟ್ರದ ಚಾರಿತ್ರ್ಯ ನಿರ್ಮಾಣದಲ್ಲಿ ಹಾಗೂ ಶಿಕ್ಷಣ ನೀಡುವಲ್ಲಿ ಅತ್ಯಂತ ಶಕ್ತಿಶಾಲೀ ಸಾಧನ ಕೂಡಾ ಕಾರ್ಯಕ್ರಮಗಳ ಮನರಂಜನಾ ಅಂಶ ಸದಾ ಆರೋಗ್ಯಕಾರಿಯಾಗೇನೂ ಇರುವುದಿಲ್ಲ ಎಂಬ ದೂರುಗಳಿವೆ. ಮುಖ್ಯ ಕಾರ್ಯಕ್ರಮ ಅಥವಾ ವಾಣಿಜ್ಯ ಕಾರ್ಯಕ್ರಮದಲ್ಲಿ ಕೀಳು ಮಟ್ಟದ ಮನರಂಜನಾ ಅಂಶಗಳಿದ್ದರೆ ಹಸಿಮನಸ್ಸುಗಳನ್ನು ಭ್ರಷ್ಟಗೊಳಿಸುವ ಅಪಾಯವಿರುತ್ತದೆ.

ದೂರದರ್ಶನದ ಪಾತ್ರದ ಎರಡನೇ ಅಂಶ ಇನ್ನೂ ಹೆಚ್ಚು ಮಹತ್ವಪೂರ್ಣ ಗ್ರಾಮೀಣ ಜನತೆಯ ಜೀವನದುಡಿಮೆಗಳಿಗೆ ಸಂಬಂಧ ಪಟ್ಟ ಶೈಕ್ಷಣಿಕ ಕಾರ್ಯಕ್ರಮಗಳನ್ನು ಸರಿಯಾಗಿ ರೂಪಿಸಿದರೆ ಮಾತ್ರ ಅವರಿಗೆ ನಿಜವಾಗಿಯೂ ಪ್ರಯೋಜನಕಾರಿಯಾಗುತ್ತದೆ ಕುರುಡುನಂಬಿಕೆ ಹಾಗೂ ಹಿಂದುಳಿಕೆಯ ವಿರುದ್ಧ ಹೋರಾಡುವ ಹಾಗೂ ಸಾಮೂಹಿಕ ಪ್ರಜ್ಞೆಯನ್ನು ಎತ್ತರಿಸುವ ಕಾರ್ಯಕ್ರಮಗಳುದೂರದರ್ಶನದ ಕಾರ್ಯಕ್ರಮಪಟ್ಟಿಯಲ್ಲಿ ಹಾಸುಹೋಕ್ಕಾಗಿರಬೇಕು. ಇಂತಹ ಕಾರ್ಯಕ್ರಮಗಳ ಮೂಲಕ ಏನಾದರೂ ಮಹತ್ವದ ಸಾಧನೆ ಸಾಧ್ಯವಾಗುವುದಾದರೆ ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶದಲ್ಲಿ ಟೆಲಿವಿಶನ್ ಮೇಲೆ ಆಗಾಧ ಖರ್ಚು ಮಾಡುವುದು ಸಮರ್ಥನೀಯವಾಗುತ್ತದೆ. ನಾಳಿನಭಾರತೀಯ ಟೆಲಿವಿಶನ್ ಜನತೆಯ ನಿರೀಕ್ಷೆಗಳ ಮಟ್ಟಕ್ಕೆ ಬರಲು ಶ್ರಮಪಟ್ಟು ಪ್ರಯತ್ನ ನಡೆಸುತ್ತದೆ. ತನ್ನ ಪ್ರಯೋಜಕತೆಯನ್ನುದೊಡ್ಡ ಪ್ರಮಾಣದಲ್ಲಿ ಹೆಚ್ಚಿಸಿಕೊಳ್ಳುತ್ತದೆ ಎಂದು ನಾನು ನಂಬುತ್ತೇನೆ.

ದೂರದರ್ಶನದ ಕಾರ್ಯನಿರ್ವಹಣೆಗೂ ಆದರ ಸಂಘಟನೆಯ ವಿಧಾನಕ್ಕೂ ತೀರಾ ನಿಕಟ ಸಂಭವವಿದೆಯೆಂಬುದನ್ನು ಹೇಳಲೇಬೇಕು. ಈ ಮಾಧ್ಯಮದ ಮೇಲೆ ಹತೋಟಿಯಿಡುವಲ್ಲಿ ಕೇಂದ್ರ ಸರ್ಕಾರಕ್ಕೆ ಗಮನಾರ್ಹ ಪಾತ್ರವಿರುವುದು ಅನಿವಾರ್ಯವೇನೋ ನಿಜ. ಅದೇ ರೀತಿ ವಿವಿಧ ರಾಜ್ಯಗಳ ಸ್ಥಳೀಯ ಸರ್ಕಾರಗಳಿಗೂ ತಂತಮ್ಮ ರಾಜ್ಯಗಳಲ್ಲಿ ದೂರದರ್ಶನದ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಹಾಗೂ ಹತೋಟಿಯಿಡುವಲ್ಲಿ ಪರಿಣಾಮಕಾರೀ ಅವಕಾಶವಿರಬೇಕಾದುದು ಕೂಡಾ ಅತ್ಯಗತ್ಯ. ಕೇಂದ್ರ, ರಾಜ್ಯಗಳು, ವಿರೋಧ ಪಕ್ಷಗಳು ಹಾಗೂ ವಿವಿಧ ಕ್ಷೇತ್ರಗಳಲ್ಲಿನ ಗಣ್ಯ ವ್ಯಕ್ತಿಗಳ ನಡುವೆ ಪರಸ್ಪರಜಂಟಿಸಮಾಲೋಚನೆಗಳ ಮೂಲಕ ದೂರದರ್ಶನದ ನಿರ್ವಹಣ ಸೂತ್ರಗಳನ್ನು ನಿರ್ಧರಿಸಬೇಕು.

(8ನೇ ಪುಟ ನೋಡಿ)

# ಮಾತಿಗಿಂತ, ಕೃತಿ ಮೇಲು ಕರ್ನಾಟಕ ಸರ್ಕಾರದ ಸಾಧನೆ

ಕನ್ನಡ ರಾಜ್ಯೋತ್ಸವ ದಿನ: ಕನ್ನಡ ಮಾತನಾಡುವ ಜನರೆಲ್ಲ ಒಂದು ಗೂಡಿ, ಒಂದೇ ಆಡಳಿತಕ್ಕೆ ಒಳಪಟ್ಟ ಅಪೂರ್ವ ದಿನ. ಈ ಮಂಗಳ ದಿನದ ಮೂವತ್ತೊಂದನೆಯ ವಾರ್ಷಿಕೋತ್ಸವವನ್ನು ಆಚರಿಸುತ್ತಿದ್ದೇವೆ. ಈ ಮೂರು ದಶಕಗಳಲ್ಲಿ ಕನ್ನಡ ನಾಡು, ಕನ್ನಡ ನುಡಿ, ಸಂಸ್ಕೃತಿ, ಸಾಹಿತ್ಯ, ಕಲೆಗಳ ಸಂವರ್ಧನೆಗಾಗಿ ಸರ್ಕಾರ ಅವಿರತವಾಗಿ ಶ್ರಮಿಸಿದೆ. ಕನ್ನಡ ಜನತೆಯ ಕ್ಷೇಮಕ್ಕಾಗಿ ಹಲವು ಹತ್ತು ಬಗೆಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕಾರ್ಯಗತಗೊಳಿಸುತ್ತಿದೆ. ಈ ಎಲ್ಲಾ ಕಾರ್ಯಗಳ ಸಿಂಹಾವಲೋಕನಕ್ಕೆ ರಾಜ್ಯೋತ್ಸವ ದಿನ : ಪ್ರಶಸ್ತ ದಿನ.

ಈ ಎಲ್ಲಾ ಸಾಧನೆಗಳಿಗೆ ಜನತೆಯ ಕಾರಣ ಎಂಬುದು ಸರ್ಕಾರದ ದೃಢವಾದ ನಂಬಿಕೆ. ಜನತೆಯ ಕಲ್ಯಾಣದ ಬಗ್ಗೆ ಕಳಕಳಿಯುಳ್ಳ ಕರ್ನಾಟಕದ ಸರ್ಕಾರ ಈ ಆನಂದದ ಸಂದರ್ಭದಲ್ಲಿ ಎಲ್ಲ ಕನ್ನಡಿಗರಿಗೂ ತನ್ನ ಶುಭಾಶಯಗಳನ್ನು ಕೋರುತ್ತದೆ. ಒಟ್ಟು ಸಮಾಜದ ಅಗತ್ಯಗಳಿಗೆ ಸಂಬಂಧಿಸಿದಂತೆ ಧೋರಣೆಗಳನ್ನು ರೂಪಿಸಿ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು ಬದ್ಧವಾಗಿದೆ ಎಂಬ ಅಂಶವನ್ನು ಪುನರ್ ದೃಢೀಕರಿಸುತ್ತದೆ.

**ಜನತೆಗೆ ಅಧಿಕಾರ :** ಜಿಲ್ಲಾ ಪರಿಷತ್ತುಗಳನ್ನು ರಚಿಸುವುದರ ಮೂಲಕ ಮಹಾತ್ಮ ಗಾಂಧೀಜಿಯವರ ಕನಸು ನನಸಾಗಿದೆ. "ಜನತೆಯ ಕೈಗೆ ಅಧಿಕಾರ"– ಇದು ಈಗ ಕಾರ್ಯರೂಪಕ್ಕೆ ಬಂದಿದೆ. ಮತ ಚಲಾಯಿಸಲು ವಯೋಮಿತಿಯನ್ನು ಇಳಿಸುವುದು ಮಹಿಳೆಯರಿಗೆ ಮತ್ತು ಪರಿಶಿಷ್ಟ ಜಾತಿ– ಜನಾಂಗದವರಿಗೆ ಮೀಸಲಾತಿ ಮುಂತಾದ ಅನೇಕ ಚುನಾವಣಾ ಸುಧಾರಣೆಗಳು, ಆಡಳಿತ ವಿಕೇಂದ್ರೀಕರಣದ ಆಶಯವನ್ನು ನಿಜವಾಗಿ ಅರ್ಥಪೂರ್ಣವಾಗಿಸಿ ಪ್ರಜಾಪ್ರಭುತ್ವ ತತ್ವವನ್ನು ಸಾರ್ಥಕಗೊಳಿಸಿದೆ.

ಸ್ಥಳೀಯ ಸಂಸ್ಥೆಗಳ ಚುನಾವಣೆ, ಪ್ರಜಾಪ್ರಭುತ್ವ ಪದ್ಧತಿಯನ್ನು ಪುನರ್ ಚೈತನ್ಯಗೊಳಿಸಿದೆ. "ಲೋಕಾಯುಕ್ತ ರಚನೆ" ಸಾರ್ವಜನಿಕ ಬದುಕಿನಲ್ಲಿ ಪ್ರಾಮಾಣಿಕತೆಯನ್ನು ತರುವ ದಿಶೆಯಲ್ಲಿ ಒಂದು ವಿನೂತನ ಪ್ರಯತ್ನ. ಆಡಳಿತದ ಎಲ್ಲಾ ಹಂತಗಳಲ್ಲೂ ಕನ್ನಡ ಬಳಕೆಯಿಂದ ಆಡಳಿತವನ್ನು ಜನರ ಸಮೀಪಕ್ಕೆ ತರಲಾಗಿದೆ. ಕಲೆ, ಸಂಸ್ಕೃತಿ ಮತ್ತು ಕ್ರೀಡಾ ಕ್ಷೇತ್ರಗಳಲ್ಲಿ ಆಗಿರುವ ಪ್ರಗತಿ ಕಣ್ಣಿಗೆ ಕಾಣುವಂಥದು.

**ಭೀಕರ ಬರಗಾಲ :** ಕಳೆದ 5 ವರ್ಷಗಳಿಂದ ರಾಜ್ಯದಲ್ಲಿ ಹಿಂದೆಂದೂ ಕಂಡರಿಯದ ಭೀಕರ ಬರಗಾಲ. ಬರಪೀಡಿತರಿಗೆ ಸಕಾಲಿಕ ನೆರವು ನೀಡಲು ಸರ್ಕಾರ ಲಭ್ಯವಿರುವ ಸಂಪನ್ಮೂಲಗಳನ್ನು ವ್ಯವಸ್ಥಿತವಾಗಿ ಬಳಸಿದೆ. ಬರಪರಿಹಾರ ಕಾರ್ಯಗಳು ಸಮಸ್ಯೆಯನ್ನು ಪರಿಹರಿಸುವುದರ ಜೊತೆಗೆ ಶಾಶ್ವತ ಸಾರ್ವಜನಿಕ ಆಸ್ತಿ ನಿರ್ಮಾಣಕ್ಕೂ ನೆರವಾಗಿದೆ. ಇಂಥ ವಿಷಮ ಪರಿಸ್ಥಿತಿಯಲ್ಲೂ ಸರ್ಕಾರ ಪೃಗತಿಪರ ಕಾರ್ಯಕ್ರಮಗಳನ್ನು ಕಡೆಗಣಿಸಿಲ್ಲ.

**ನೀರಿಗಾಗಿ ಶೋಧ :** 1983 ಮತ್ತು 1987ರ ಅವಧಿಯಲ್ಲಿ 1104 ಹಳ್ಳಿಗಳಿಗೆ ನಲ್ಲಿಗಳ ಮೂಲಕ ನೀರನ್ನು ಒದಗಿಸಲಾಗಿದೆ. ಮತ್ತು 47391 ಕೊಳವೆ ಬಾವಿಗಳನ್ನು ತೋಡಲಾಗಿದೆ.

**ಹಸಿರು ಕಾರ್ಡು ಯೋಜನೆ :** ಬಡವರು ಆಹಾರಧಾನ್ಯ ಮತ್ತು ಬಟ್ಟೆಗಳನ್ನು ರಿಯಾಯಿತಿ ದರಗಳಲ್ಲಿ ಕೊಳ್ಳಲು, "ಹಸಿರು ಕಾರ್ಡು ಒಂದು ವರದಾನ, 30 ಲಕ್ಷಕ್ಕೂ ಹೆಚ್ಚು ಕುಟುಂಬಗಳಿಗೆ ಇದರ ಪ್ರಯೋಜನ.

**ಅಗತ್ಯವುಳ್ಳವರಿಗೆ ನೆರವು:** ಆಸರೆಯಿಲ್ಲದ ಅನಾಥ ವಿಧವೆಯರಿಗೆ 'ವಿಧವಾ ಮಾಸಾಶನ', 3,64,000, ಫಲಾನುಭವಿಗಳಿಗೆ ತಿಂಗಳಿಗೆ 50 ರೂ.ಗಳ ಮಾಸಿಕ ನೆರವು : ಕೃಷಿ ಕಾರ್ಮಿಕ ಗರ್ಭಿಣಿ ಸ್ತ್ರೀಯರಿಗೆ 3 ತಿಂಗಳ ಅವಧಿಗೆ, ಮಾಸಿಕ 100 ರೂ.ಗಳ ಹೆರಿಗೆ ಭತ್ಯೆ. ಬಡವರು ಕಡಿಮೆ ಖರ್ಚಿನಲ್ಲಿ ಮದುವೆ ಮಾಡಲು ಅನುಕೂಲವಾಗುವ "ತಾಳೀ ಭಾಗ್ಯ" ಯೋಜನೆಯಿಂದ ಸಾವಿರಾರು ಬಡ ಕುಟುಂಬಗಳಿಗೆ ಸಾಲದ ಹೊರೆಯಿಂದ ಬಿಡುಗಡೆ.

**ಉಚಿತ ಪಠ್ಯ ಪುಸ್ತಕ ಮತ್ತು ಸಮವಸ್ತ್ರ ;** ಬಡವರ ಮಕ್ಕಳಿಗೆ ಶಿಕ್ಷಣ ಸೌಲಭ್ಯ ವಿಸ್ತರಣೆಯ ದಿಸೆಯಲ್ಲಿ ಉಚಿತ ಪಠ್ಯ ಪುಸ್ತಕ ಮತ್ತು ಸಮವಸ್ತ್ರ ವಿತರಣೆ ಕ್ರಾಂತಿಕಾರೀ ಹೆಜ್ಜೆ, ಇದರಿಂದ ರಾಜ್ಯದ 70 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರ ಮತ್ತು 165 ಲಕ್ಷಕ್ಕೂ ಹೆಚ್ಚು ಮಕ್ಕಳಿಗೆ ಉಚಿತ ಪಠ್ಯ ಪುಸ್ತಕ ಲಭ್ಯ.

**ಒಣ ಬೇಸಾಯಾಭಿವೃದ್ಧಿ :** ಮಳೆಯನ್ನು ಆಧರಿಸಿದ ರಾಜ್ಯದ ಸುಮಾರು ಶೇಕಡಾ 80 ರಷ್ಟು ರೈತರಿಗೆ ನೆರವಾಗುವುದು, ಈ ಯೋಜನೆಯ ಉದ್ದೇಶ. ನೀರಿನ ಸಮರ್ಪಕ ಬಳಕೆಯ ವ್ಯವಸ್ಥೆ, ಕಡಿಮೆ ವೆಚ್ಚ, ಅಧಿಕ ಉತ್ಪಾದನೆ, ಕೃಷಿ ಮತ್ತು ಪಶು ಸಂಗೋಪನೆಗಳ ಪೂರಕಬೆಳವಣಿಗೆ ಇವು ಈ ಯೋಜನೆಯ ವ್ಯಾಪ್ತಿಗೆ ಬರುವ ಪ್ರಮುಖ ಅಂಶಗಳು. ಈ ಯೋಜನೆಯಡಿಯಲ್ಲಿ 1,11,549 ಹೆಕ್ಟರ್ ಕೃಷಿ ಭೂಮಿ ಮತ್ತು 11,396 ಹೆಕ್ಟರ್‌ಗಳಷ್ಟು ಕೃಷಿಗೆ ಯೋಗ್ಯವಲ್ಲದ ಭೂ ಪ್ರದೇಶವನ್ನು ಅಭಿವೃದ್ಧಿಗೊಳಿಸಲಾಗಿದೆ.

**ಸಾಮಾಜಿಕ ಅರಣ್ಯ :** 1983 ರಿಂದ ಕಾರ್ಯಗತವಾಗುತ್ತಿರುವ ಸಾಮಾಜಿಕ ಅರಣ್ಯ ಯೋಜನೆಯಿಂದ 23,757 ಹೆಕ್ಟರ್‌ನಷ್ಟು ಭೂ ಪ್ರದೇಶ ಹಸಿರಾಗಿದೆ. ಗಿಡನೆಟ್ಟು ಬೆಳೆಸುವ ಆಸಕ್ತಿಯುಳ್ಳ ಜನರಿಗೆ ಸಸಿ ಮತ್ತು ಸಲಹೆಯನ್ನು ಉಚಿತವಾಗಿ ಒದಗಿಸಲಾಗುತ್ತಿದೆ. ಈ ವರೆಗೆ 3300 ಲಕ್ಷ ಸಸಿಗಳನ್ನು ನೆಡಲಾಗಿದೆ.

ಕೈಗಾರಿಕಾ ಕ್ಷೇತ್ರದ ಒಂದು ಮಹತ್ತರ ಸಾಧನೆಯೆಂದರೆ ಕೈಗಾರಿಕೆಗಳ ವಿಕೇಂದ್ರೀಕರಣ– ಪರಿಣಾಮವಾಗಿ ರಾಜ್ಯದಾದ್ಯಂತ ಕೈಗಾರಿಕೆಗಳು ವಿಕಾಸವಾಗಲು ಮುಕ್ತ ವಾತಾವರಣ.

ಕರ್ನಾಟಕದಲ್ಲಿ ಈಗ ಹೊಸ ಮತ್ತು ಕ್ರಾಂತಿಕಾರಿ ಕಾರ್ಯಕ್ರಮಗಳು. ಜನತೆಯ ಬದುಕಿನ ಗುಣಮಟ್ಟವನ್ಷು ಸುಧಾರಿಸುವುದೇ ಈ ಎಲ್ಲ ಕಾರ್ಯಕ್ರಮಗಳ ಗುರಿ. ಈ ಐತಿಹಾಸಿಕ ದಿನದಂದು ಜನತೆಯ ಸೇವೆಗೆ ಸರಕಾರ ಸದಾ ಕಂಕಣ ಬದ್ಧ ಎಂಬುದನ್ನು ಮತ್ತೊಮ್ಮೆ ದೃಢಪಡಿಸುತ್ತದೆ.

# ಚೀನೀ ಕಮ್ಯುನಿಸ್ಟ್ ಪಕ್ಷದ 13ನೇ ಮಹಾಧಿವೇಶನ

ಚೀನಾ ದೇಶವಿಂದು ಸಮಾಜವಾದದ ಪ್ರಥಮ ಹಂತದಲ್ಲಿದೆ. ಇಲ್ಲಿ ಸಮಾಜವಾದಿ ಆಧುನೀಕರಣವು ಪರಿಪೂರ್ಣಗೊಳ್ಳಬೇಕಾದರೆ, ಉತ್ಪಾದನಾ ಸಾಧನಗಳ ಒಡೆತನವು ಸಮಾಜವಾದಿ ಒಡೆತನವಾಗಿ ಪರಿವರ್ತನೆಗೊಂಡ 1950 ರ ದಶಕದಿಂದ ಸುಮಾರು ನೂರುವರ್ಷ ಬೇಕಾಗಬಹುದು. ಈ ಇಡೀ ಅವಧಿಯನ್ನು ಸಮಾಜವಾದದ ಪ್ರಾಥಮಿಕ ಹಂತದ ವರ್ಷಗಳೆಂದೇ ಪರಿಗಣಿಸಬೇಕಾಗುತ್ತದೆ ಎಂದು ಚೀನೀ ಕಮ್ಯುನಿಸ್ಟ್ ಪಕ್ಷದ 13ನೇ ಮಹಾಧಿವೇಶನಕ್ಕೆ ನೀಡಲಾದ ವರದಿಯಲ್ಲಿ ಕಾರ್ಯನಿರ್ವಾಹಕ ಪ್ರಧಾನಕಾರ್ಯದರ್ಶಿ ಝುವೋಜಿಂಗ್ ಹೇಳಿದ್ದಾರೆ.

ಅಕ್ಟೋಬರ್ 25 ರಿಂದ ನವಂಬರ್ 1ರ ವರೆಗೆ ನಡೆದ ಮಹಾಧಿವೇಶನದಲ್ಲಿ ನಾಲ್ಕುಕೋಟಿ ಅರವತ್ತು ಲಕ್ಷಕ್ಕೂ ಮಿಕ್ಕಿದ ಸದಸ್ಯರನ್ನೊಳಗೊಂಡಚೀನೀ ಕಮ್ಯುನಿಸ್ಟ್ ಪಕ್ಷದ 1936 ಪ್ರತಿನಿಧಿಗಳು ಭಾಗವಹಿಸಿದ್ದರು. ಅಧಿವೇಶನದ ಮುಂದಿದ್ದ ಮುಖ್ಯ ಸವಾಲು ಚೀನಾದಲ್ಲಿನ ಸುಧಾರಣೆಗಳನ್ನು ಇನ್ನಷ್ಟು ಆಳವಾಗಿ ಹಾಗೂ ತೀವ್ರವಾಗಿ ಮುಂದುವರಿಸುವ ಪ್ರಶ್ನೆಯೆಂದು ಝುವೋಜಿಯೆಂಗ್ ಹೇಳಿದ್ದಾರೆ.

ಪ್ರಾಥಮಿಕ ಹಂತವೆಂದರೆ ಸಮಾಜವಾದವನ್ನು ಕಟ್ಟುವ ಕಾರ್ಯದಲ್ಲಿ ಎಲ್ಲ ದೇಶಗಳು ಎದುರಿಸಬೇಕಾದಂತಹ ಸಾಮಾನ್ಯ ಅರ್ಥದ ಹಂತವಲ್ಲ. ಇದು ಉತ್ಪಾದಕ ಶಕ್ತಿಗಳು ಹಿಂದುಳಿದಿರುವ ಅನಭಿವೃದ್ಧ ಸರಕು ಉತ್ಪಾದನಾ ವ್ಯವಸ್ಥೆಯಿರುವ ಚೀನಾದ ವಿಶಿಷ್ಟ ಪರಿಸ್ಥಿತಿಯಲ್ಲಿ ಸಮಾಜವಾದವನ್ನು ಕಟ್ಟಲು ಚೀನಾ ದೇಶವು ಹಾದುಹೋಗಲೇ ಬೇಕಾದಂತಹ ಒಂದು ನಿರ್ದಿಷ್ಟ ಸ್ಥಿತಿಯೆಂದೂಜಿಯೂಂಗ್ಅವರ ವರದಿ ವಿಶ್ಲೇಷಿಸಿದೆ. ಚೀನೀಸಮಾಜವು ಈಗಾಗಲೇ ಸಮಾಜವಾದಿ ಸಮಾಜವಾಗಿದೆ. ಈ ಮಾರ್ಗದಿಂದ ವಿಚಲಿತರಾಗದೆ ಸಮಾಜವಾದಿ ರಾಷ್ಟ್ರ ರಚನೆಯ ಕಾರ್ಯವನ್ನು ಮುಂದುವರಿಸಬೇಕು. ಎರಡನೆಯದಾಗಿ ಚೀನಾದ ಸಮಾಜವು ಸಮಾಜವಾದದ ಪ್ರಾಥಮಿಕ ಹಂತದಲ್ಲಿದೆ. ಇದೊಂದು ವಾಸ್ತವಿಕತೆ. ಈ ಹಂತವನ್ನು ತಪ್ಪಿಸಿಕೊಂಡು ಮುನ್ನಡೆಯಲು ಸಾಧ್ಯವಿಲ್ಲ. ಹಾಗಾಗಿ ಈ ಹಂತದಲ್ಲಿ ಪಕ್ಷದ ಮೂಲಭೂತ ನೀತಿ ಯೇನು? ಸುಧಾರಣೆಗಳು ಮತ್ತು ಮುಕ್ತ ಧೋರಣೆಗಳಿಗೆ ಅಂಟಿಕೊಂಡೇ ಆರ್ಥಿಕ ಅಭಿವೃದ್ಧಿಯನ್ನು ಮುಖ್ಯ ಗುರಿಯಾಗಿಸಿಕೊಂಡು ಚೀನಾವನ್ನು ಶ್ರೀಮಂತ, ಶಕ್ತ ಪ್ರಜಾಸತ್ತಾತ್ಮಕ ಹಾಗೂ ಸಾಂಸ್ಕೃತಿಕವಾಗಿ ಅತ್ಯಂತ ಪ್ರಗತಿ ಹೊಂದಿದ ಸಮಾಜವಾದಿ ರಾಷ್ಟ್ರವಾಗಿ ಪರಿವರ್ತಿಸುವುದೇ ಚೀನಿ ಕಮ್ಯುನಿಸ್ಟ್ ಪಕ್ಷದ ಗುರಿಯೆಂದು ಝೂಫೋಜಿಂಯಾಂಗ್ವಿಶ್ಲೇಷಿಸಿದ್ದಾರೆ

## ಅಫಘಾನ್ ಅಧ್ಯಕ್ಷರಾಗಿ ನಜೀಬುಲ್ಲಾ ಆಯ್ಕೆ

ನವಂಬರ್ 30 ರಂದು ಕಾಬೂಲಿನಲ್ಲಿ ನಡೆದ ಅಫಘಾನಿಸ್ಥಾನದ ವರಿಷ್ಟ ರಾಷ್ಟ್ರೀಯ ಸಮಾವೇಶವು (ಲೋಯೋ ಜಿಗರ್ಾಹ್) ಪೀಪಲ್ಸ್ ಡೆಮೊಕ್ರಟಿಕ್ ಪಾರ್ಟಿಯ ಅಧ್ಯಕ್ಷರಾದ ನಜೀಬುಲ್ಲಾ ಅವರನ್ನು ಏಳು ವರ್ಷಗಳ ಅವಧಿಗೆ ಅಫಘಾನಿಸ್ಥಾನದ ಅಧ್ಯಕ್ಷರಾಗಿ ಆರಿಸಿದೆ. ಬುಡಕಟ್ಟು ಜನಾಂಗದ ಮುಖಂಡರು, ಬುದ್ಧಿ ಜೀವಿಗಳು, ಇಸ್ಲಾಮಿಕ್ ಮುಂದಾಳುಗಳು ಮತ್ತು ಸೈನ್ಯ ಹಾಗೂ ಕಮ್ಯುನಿಸ್ಟ್ ಪಕ್ಷದ ಒಟ್ಟು 1500 ಪ್ರತಿನಿಧಿಗಳನ್ನು ಒಳಗೊಂಡಿದ್ದ ಲೋಯೋ ಜಿಗರ್ಾ ನಜೀಬುಲ್ಲಾ ಅವರನ್ನು ದಕ್ಷ, ಸಮರ್ಥ ಹಾಗೂ ಅಫಘಾನಿಸ್ಥಾನದಪರಿಸ್ಥಿತಿಯಕುರಿತುಸರಿಯಾದತಿಳುವಳಿಕೆಯುಳ್ಳಮುಖಂಡರೆಂದ ವರ್ಣಿಸಿದೆ. ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ.

## ಅಮೇರಿಕಾ ಟಿ. ವಿ. ಯಲ್ಲಿ ಗೋರ್ಬಚೇವ್

ಸೋವಿಯೆತ್ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಮೈಖೇಲ್ ಗೋರ್ಬಚೇವ್ ಮೊತ್ತ ಮೊದಲಬಾರಿಗೆ ಅಮೇರಿಕಾದ ಟೆಲಿವಿಷನ್‌ಗೆ ಸಂದರ್ಶನವೊಂದನ್ನು ನೀಡಿದ್ದಾರೆ. ಒಂದು ಗಂಟೆಗಳ ಕಾಲ ನಡೆದ ಈ ಸಂದರ್ಶನ ಅಮೇರಿಸ್ ಟಿ.ವಿ.ಯಲ್ಲಿ ಕಳೆದ ಸೋಮವಾರ ಬಿತ್ತರಿಸಲ್ಪಟ್ಟಿದೆ.

## ಶಸ್ತ್ರಾಸ್ತ್ರ ತುಂಬಿದ ಹಡಗುಗಳಿಗೆ ಬಹಿಷ್ಕಾರ

ಶಸ್ತ್ರಾಸ್ತ್ರಗಳನ್ನು ತುಂಬಿಸಿಯಲು ಅವಕಾಶ ಮಾಡಿಕೊಡಬಾರದು ಎಂದು ಜಪಾನಿನ ಕಮ್ಯುನಿಸ್ಟ್ ಪಕ್ಷದ 18 ನೇ ಮಹಾಧಿವೇಶನ ಅಲ್ಲಿನ ಸರಕಾರಕ್ಕೆ ಎಚ್ಚರಿಕೆಕೊಟ್ಟಿದೆ. ಜಪಾನಿನ ಸಂವಿಧಾನದ ಪ್ರಕಾರ ಜಪಾನ್ ಅಣುಅಸ್ತ್ರಗಳ ಬಳಕೆಗೆ ನೆರವಾಗುವುದು ನಿಷೇಧಿಸಲ್ಪಟ್ಟಿದೆಯೆನ್ನುವುದನ್ನು ಮಹಾಧಿವೇಶನವು ಜಪಾನ್ ಪ್ರಧಾನಿಗೆ ನೆನಪಿಸಿಕೊಟ್ಟಿದೆಯಲ್ಲದೆ ಅಮೇರಿಕಾ ಜೊತೆಗಿನ ಎಲ್ಲ ಒಪ್ಪಂದಗಳನ್ನು ರದ್ದುಪಡಿಸಬೇಕು ಮತ್ತು ಅಮೇರಿಕಾದ ಎಲ್ಲಾ ನೌಕನೆಲೆಗಳನ್ನು ಮುಚ್ಚಿಸಬೇಕೆಂದು ಒತ್ತಾಯಿಸಿದೆ.

ಟೋಕಿಯೋದಉಪನಗರ"ಅಮಿತಿ"ಯಲ್ಲಿ ತಾ.25-11-87 ರಿಂದ ಜಪಾನಿನ ಕಮ್ಯುನಿಸ್ಟ್ ಪಕ್ಷದ ಈ ಅಧಿವೇಶನದಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಪರವಾಗಿ ಕಾ. ಪ್ರಕಾಶ್‌ಕಾರಟ್ ಭಾಗವಹಿಸಿದ್ದರು. ಜರ್ಮನ್ ಪ್ರಜಾಪ್ರಭುತ್ವ ಗಣತಂತ್ರದ ಮುಖಂಡರಾದ ಕಾ.ಎರಿಕ್ ಹೊನೆಕ್ಕರ್ ಅಧಿವೇಶನಕ್ಕೆಶುಭಾಶಯ ನೀಡಿ ವಿಶ್ವವನ್ನು ಅಣುಯುದ್ಧದ ಅಪಾಯದಿಂದಪಾರುಗೊಳಿಸಬೇಕೆಂದೂ ಹಿರೋಷಿಮಾ, ನಾಗಾಸಾಕಿಗಳದುರಂತ ಮತ್ತೊಮ್ಮೆ ಸಂಭವಿಸದಂತೆ ಎಚ್ಚರಿಕೆ ವಹಿಸಬೇಕೆಂದು ಕರೆ ನೀಡಿದ್ದರು. ○

## ಗ್ಯಾಂಗ್‌ಮೆನ್‌ಗಳ ಧರಣಿ

ತಾ.25.11.87ರಂದು ಲೋಕೋಪಯೋಗಿ ಇಲಾಖೆಯ ರಸ್ತೆ ಕೆಲಸಗಾರರುತಮಗಾಗುತ್ತಿರುವ ಅನ್ಯಾಯವನ್ನು ಪ್ರತಿಭಟಿಸಿ ಸುಮಾರು 49 ಗೇಂಗ್‌ಮೆನ್‌ಗಳು ಧರಣಿ ಉಪವಾಸ ಸತ್ಯಾಗ್ರಹ ನಡೆಸಲಾಯಿತು.

ಈ ಸತ್ಯಾಗ್ರಹವು ಕೊಡಗು ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ (ಸಿ.ಐ.ಟಿ.ಯು.) ವಿರಾಜಪೇಟೆಯ ನೇತೃತ್ವದಲ್ಲಿ ನಡೆದಿದೆ. ಕೆಲಸಮಾಡಿದರೂ ಗೈರುಹಾಜರಿ ಹಾಕುವುದನ್ನು ನಿಲ್ಲಿಸಿ ಇದುವರೆಗೆ ಕಡಿತ ಮಾಡಿದ ಕೂಲಿಯನ್ನು ಕೊಡಬೇಕು. ಸರ್ವಾಧಿಕಾರಿ ರೀತಿ ಜಿಲ್ಲಾ ಪರಿಷತ್‌ಗೆ ವರ್ಗಾವಣೆ ಮಾಡುವುದನ್ನು ರದ್ದುಪಡಿಸುವುದು. ನಿವೃತ್ತರೆಲ್ಲರಿಗೂ ಗ್ರಾಚ್ಯುಟಿ ನೀಡಬೇಕು ಎಂಬ ಬೇಡಿಕೆಗಳಿವೆ.

## ತ್ರಿಪುರಾದಲ್ಲಿ ಪೆಟ್ರೋಕೆಮಿಕಲ್ ಉದ್ದಿಮೆ

ತ್ರಿಪುರಾದಲ್ಲಿ ನೂರುಕೋಟಿ ರೂಪಾಯಿಗಳ ವೆಚ್ಚದಲ್ಲಿ ಒಂದು ಪೆಟ್ರೋರಾಸಾಯನಿಕ ಸಂಕೀರ್ಣವನ್ನುಸ್ಥಾಪಿಸಲಾಗುವುದು. ಇದು ಈಶಾನ್ಯಭಾರತದ ಕೈಗಾರಿಕಾ ಅಭಿವೃದ್ಧಿಯ ಮೇಲೆ ವಿಶೇಷ ಪ್ರಭಾವ ಬೀರಲಿದೆ. ನೈಸರ್ಗಿಕ ಅನಿಲ ಈ ಉದ್ದಿಮೆಗೆ ಕಚ್ಚಾವಸ್ತು. ತ್ರಿಪುರಾದಲ್ಲಿ ಉತ್ತಮ ಗುಣಮಟ್ಟದ ನೈಸರ್ಗಿಕ ಅನಿಲ ಅಪಾರವಾಗಿದೆ. ರಾಜ್ಯ ಸರ್ಕಾರ 26./. ಬಂಡವಾಳ ಹೂಡಲಿದ್ದು ಪ್ರಮೋಟರ್ 25./. ಹಾಗೂ ಉಳಿದ 49./. ಜನತೆಯಿಂದ ಶೇರುಗಳ ಮೂಲಕ ಎತ್ತಲಾಗುವುದು. ಅಗತ್ಯವಿದ್ದಲ್ಲಿ ವಿದೇಶೀ ಸಹಾಯವನ್ನು ಈ ಕಾರ್ಖಾನೆ ಸ್ಥಾಪಿಸಲು ಪಡೆಯಬಹುದು. ಕೇಂದ್ರ ಸರ್ಕಾರದ ಅನುಮತಿ ದೊರೆತೊಡನೆ ಸಂಕೀರ್ಣದ ಕೆಲಸಆರಂಭವಾಗಿ 18 ತಿಂಗಳಲ್ಲಿ ಪೂರ್ಣಗೊಳ್ಳುವದು

## ಬಿಹಾರ-ಬಡ ರೈತ ಮುಖಂಡರ ಕೊಲೆ

ಬಸಾಹಿ ಗ್ರಾಮದ ಕಾಂ.ಧರ್ಮದೇವ್‌ಓಝೂ ರವರನ್ನು ಊಳಿಗಮಾನ್ಯ ಶಕ್ತಿಗಳು ಹಾಗೂ ಅವುಗಳ ಗೂಂಡಾಗಳು ಇದೇ ನವಂಬರ್ 1 ರಂದು ಗುಂಡಿಕ್ಕಿ ಕೊಂದಿದ್ದಾರೆ. ಕಾಂ.ಓಝೂ ಹಲವು ವರ್ಷಗಳಿಂದ ಇಲ್ಲಿನ ಬಡ ರೈತರು ಹಾಗೂ ಕೃಷಿ ಕೂಲಿಗಾರರಿಗೆ 100 ಎಕ್ರೆ ಸರ್ಕಾರೀ ಜಮೀನನ್ನು ಹಂಚು ವಂತ ಮಾಡಲು ಸತತ ಪ್ರಯತ್ನ ನಡೆಸುತ್ತಾ ಬಂದಿದ್ದರು.

ಬಂದೂಕಿನ ಗುಂಡಿನ ಸದ್ದು ಕೇಳಿ ಓಡಿಬಂದ ಕಾಂ.ಓಝೂರವರ ಪತ್ನಿ ಕೊಲೆಗಾರರಲ್ಲಿ ಕೆಲವರನ್ನು ಗುರುತಿಸಿ ಅದನ್ನು ಎಫ್.ಐ.ಆರ್.ನಲ್ಲಿ ಕಾಣಿಸಿದ್ದರೂ ಇದುವರೆಗೂ ಪೋಲಿಸರು ಒಬ್ಬನೇ ಆರೋಪಿಯನ್ನು ಬಂಧಿಸಿಲ್ಲ. ಬದಲಿಗೆ, ಹಲವು ಭೂಹೀನರ ಮೇಲೆ ತಪ್ಪು ಆರೋಪ ಹೊರಿಸಲು ಪ್ರಯತ್ನಿಸುತ್ತಿದೆ!

## ಝಾರ್‌ಖಂಡ್ ಪ್ರತ್ಯೇಕತಾವಾದಿಗಳ ಭೀಕರ ಕೃತ್ಯಗಳ ವಿರುದ್ಧ ಬಂದ್

ನವಂಬರ್ 2 ರಂದು ಶಾಲೆಯತ್ತ ಹೋಗುತ್ತಿದ್ದ ಕಿಸಾನ್‌ಸಭಾದ ಝಾರ್‌ಖಂಡ್ ಬ್ಲಾಕ್ ಸಮಿತಿಯ ಕಾರ್ಯದರ್ಶಿ ಹಾಗೂ ಸಿ.ಪಿ.ಐ.(ಎಂ) ಮುಖಂಡ ಕಾಂ.ಚಿತ್ತೇಶ್ವರ್‌ನಾಯಕ್‌ಅವರನ್ನು ಝಾರ್‌ಖಂಡ್ ಬೆಂಬಲಿಗರು ಅಮಾನುಷವಾಗಿ ಕೊಂದಿರುವುದನ್ನು ಪ್ರತಿಭಟಿಸಿ ನವಂಬರ್ 4 ರಂದು ಮಿದ್ನಾಪುರ ಜಿಲ್ಲೆಯಲ್ಲಿ ಸಂಪೂರ್ಣಬಂದ್ ಆಚರಿಸಲಾಯಿತು. ಝಾರ್‌ಖಂಡ್‌ನಲ್ಲಿ ಒಂದು ದಿನದ ಸಂಪೂರ್ಣ ಬಂದ್ ನಡೆಯಿತು. ಝಾರ್‌ಖಂಡ್ ಬೆಂಬಲಿಗರ ಅಮಾನುಷ ಕೃತ್ಯಗಳ ವಿರುದ್ಧ ಜಿಲ್ಲೆಯ ಎಲ್ಲೆಡೆ ತೀವ್ರ ಪ್ರತಿಭಟನೆ ಕಂಡು ಬರುತ್ತಿದೆ.

## ಪೂರ್ವಜರ್ಮನಿಯಲ್ಲಿ ಸಿ.ಪಿ.ಐ.(ಎಂ) ನಿಯೋಗ

ಒಂದು ವಾರದ ಕಾಲ ಜರ್ಮನ್ ಜನವಾದೀ ಗಣತಂತ್ರಕ್ಕೆ ಭೇಟಿ ನೀಡಿದ್ದ ಸಿ.ಪಿ.ಐ.(ಎಂ) ಕೇಂದ್ರ ಸಮಿತಿಯ ಒಂದು ಪ್ರತಿನಿಧಿ ಮಂಡಲಿ ನವಂಬರ್ 18 ರಂದು ಜರ್ಮನಿ ಸಮಾಜವಾದಿ ಐಕ್ಯತಾ ಪಕ್ಷದ ಕೇಂದ್ರ ಸಮಿತಿ ಕಚೇರಿಗೆ ಭೇಟಿ ನೀಡಿ ಆ ಪಕ್ಷದ ಪಾಲಿಟ್‌ಬ್ಯೂರೋ ಸದಸ್ಯರೊಂದಿಗೆ ಮಾತುಕತೆ ನಡೆಸಿತು. ಪೂರ್ವಜರ್ಮನಿಯ ಹಲವು ಸಮಾಜವಾದೀ ಉದ್ದಿಮೆ. ಗಳು, ಸಾಂಸ್ಕೃತಿಕ ಕೇಂದ್ರಗಳಿಗೆ ನಿಯೋಗ ಭೇಟಿ ನೀಡಿತು. ಟ್ರೇಡ್‌ಯೂನಿಯನ್ ಮುಖಂಡರನ್ನು ಹಾಗೂ ಪಕ್ಷದ ಶಾಲೆಯ ಲೆಚ್ಚರ್‌ರೊಂದಿಗೆ ಮಾತುಕತೆ ನಡೆಸಿತು. ಪಾಲಿಟ್‌ಬ್ಯೂರೋ ಸದಸ್ಯ ಕಾ.ಸಮರ್‌ಮುಖರ್ಜಿ ನೇತೃತ್ವದ ಈ ನಿಯೋಗದ ಇತರ ಸದಸ್ಯರೆಂದರೆ ಕೇಂದ್ರ ಸಮಿತಿಯ ಸದಸ್ರಾದ ಪ್ರಸಾದ್‌ರಾವ್ (ಆಂಧ್ರಪ್ರದೇಶ) ಹಾಗೂ ಅಜಿತ್ಯಭಟ್ಟಾಚಾರ್ಯ (ಅಸ್ಸಾಂ)

# ಪಂಜಾಬ್ : ವರ್ಗ ಮತ್ತು ಸಾಮೂಹಿಕ ಸಂಘಟನೆಗಳ ಹೋರಾಟ

ಪಂಜಾಬಿನಲ್ಲಿ ಪರಿಸ್ಥಿತಿತನ್ನಹತೋಟಿಯಲ್ಲಿದೆ ಎಂದು ಸರ್ಕಾರ ಹೇಳಿಕೊಂಡರೂ ಸಾಮ್ರಾಜ್ಯಶಾಹೀ ಬೆಂಬಲಿತ ಖಾಲಿಸ್ತಾನೀ ಭಯೋತ್ಪಾದಕರ ಉಪಟಳ ಹೆಚ್ಚುತ್ತಲೇ ಇದೆ. ಈ ಶಕ್ತಿಗಳ ವಿರುದ್ಧ ವಿವಿಧ ರೀತಿಗಳಲ್ಲಿ ಹೋರಾಟ ಮುಂದುವರಿಸುವ ಜೊತೆಗೇ ಸಿ.ಪಿ.ಐ. (ಎಂ) ನೇತೃತ್ವದ ವರ್ಗ ಹಾಗೂ ಸಾಮೂಹಿಕ ಸಂಘಟನೆಗಳು ವಿವಿಧ ಜನ ವಿಭಾಗಗಳ ತಕ್ಷಣದ ಬೇಡಿಕೆಗಳಿಗಾಗಿ ಹೋರಾಟವನ್ನು ನಡೆಸುತ್ತಿವೆ.

ಪಂಜಾಬ್‌ಕಿಸಾನ್ ಸಭಾ ಸರ್ಕಾರದಿಂದ ಬರ ಪರಿಹಾರ ಹಾಗೂ ಭತ್ತಕ್ಕೆ ಕ್ವಿಂಟಾಲಿಗೆ 17ರೂ. ಬೋನಸ್ ಪಡೆಯುವಲ್ಲಿ ಯಶಸ್ವಿಯಾಗಿದ್ದು ಕಬ್ಬಿಗೆ ಸುಯೋಗ್ಯ ಬೆಲೆಗಾಗಿ ಹೋರಾಟ ಆರಂಭಿಸಿದೆ. ಸಿ.ಪಿ.ಐ. ನೇತೃತ್ವದ ಕಿಸಾನ್ ಸಭಾ ಜೊತೆಗೂಡಿ ಈಗಾಗಲೇ ಕಬ್ಬು ಬೆಳೆಗಾರರ ಸಮಾವೇಶಗಳನ್ನು ನಡೆಸಲಾಗಿದೆ.

ಸಹಕಾರೀ ಸಕ್ಕರೆ ಕಾರ್ಖಾನೆಗಳ ಆಡಳಿತ ಮಂಡಳಿಗಳ ತೀವ್ರ ಭ್ರಷ್ಟಾಚಾರವನ್ನು ಬಯಲಿಗೆಳೆದು ಬಹಳ ವರ್ಷಗಳಿಂದ ಈ ಆಡಳಿತ ಮಂಡಳಿಗಳಿಗೆ ಚುನಾವಣೆಗಳೇ ನಡೆಯದಿರುವತ್ತ ಗಮನ ಸೆಳೆದು ತಕ್ಷಣ ಚುನಾವಣೆಗಳನ್ನು ನಡೆಸುವಂತೆ ಒತ್ತಾಯಿಸಲಾಗುತ್ತಿದೆ.

ರಾಜ್ಯಪಾಲರ ಆಡಳಿತ ಬಿರ್ಲಾ, ದಾಲ್ಮಿಯಾಗಳ ಜೊತೆಗೆ ಶಾಮೀಲಾಗಿ ಸಿ. ಐ. ಟಿ.ಯು. ಯೂನಿಯನ್‌ಗಳ ವಿರುದ್ಧ ಭದ್ರತಾಪಡೆಗಳನ್ನು ಬಳಸುವುದನ್ನು ತೀವ್ರವಾಗಿಖಂಡಿಸಿ ಅಕ್ಟೋಬರ್ 24 ರಂದು ಒಂದು ಸಮರಶೀಲ ರ್ಯಾಲಿ ನಡೆಸಲಾಯಿತು.

ಸಿ.ಐ.ಟಿ.ಯು. ಪ್ರಧಾನ ಕಾರ್ಯದರ್ಶಿ ಸಮರ್‌ಮುಖರ್ಜಿಯವರೂ ಈ ಸಭೆಯನ್ನುದ್ದೇಶಿಸಿ ಮಾತನಾಡಿ ಇದುವರೆಗೆ ಸಿ.ಐ.ಟಿ.ಯು.ವನ್ನು ದಮನ ಕ್ರಮಗಳಿಂದ ಬಗ್ಗು ಬಡಿಯಲು ಯತ್ನಿಸಿದ ಎಲ್ಲಾ ಗುತ್ತೇದಾರಿಗಳು ಕೊನೆಗೆ ಕೆಂಬಾವುಟಕ್ಕೆ ದಾರಿ ಬಿಟ್ಟು ಕೊಡಬೇಕಾಗಿ ಬಂದಿದೆ ಎಂಬುದನ್ನು ಸರ್ಕಾರಕ್ಕೆ ಜ್ಞಾಪಿಸಿಕೊಟ್ಟರು. ತಕ್ಷಣ ದಮನ ಕ್ರಮಗಳನ್ನು ನಿಲ್ಲಿಸದಿದ್ದರೆ ರಾಜ್ಯಾದ್ಯಂತ ಒಂದುದಿನದ ಮುಷ್ಕರ ನಡೆಸುವುದಾಗಿ ರ್ಯಾಲಿಯ ಮೂಲಕ ಎಚ್ಚರಿಕೆ ನೀಡಲಾಯಿತು.

ಈ ಹೋರಾಡಗಳ ಜೊತೆಗೆ ಡಿಸೆಂಬರ್ 1 ರಿಂದ 3 ದಿನ ನಡೆಯುವ ಸಿ.ಐ.ಟಿ.ಯು. ಕಾರ್ಯಕಾರೀಸಮಿತಿಯ ಸಭೆಯ ನಂತರದ ರ್ಯಾಲಿಯ ಹಾಗೂ ಡಿಸೆಂಬರ್ 9 ರ ಸಂಸತ್ ಚಲೋ ಕಾರ್ಯಕ್ರಮಕ್ಕೆ ಭರದಿಂದಸಿದ್ಧತೆಗಳು ನಡೆದಿವೆ. ○

REG No. BGW-148 MAG (2) PRB DECR 319/ 78-76

# ಕಾರ್ಮಿಕರು ಕಠಿಣ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ

(1ನೇ ಪುಟದಿಂದ)

ಸಿಂಹಳೀ ಸಂಕುಚಿತವಾದಿಗಳು ಇಬ್ಬರೂ ಒಪ್ಪಂದವನ್ನು ವಿರೋಧಿಸಿ ಸಾಮ್ರಾಜ್ಯಶಾಹಿಗಳಿಗೆ ನೆರವಾಗುತ್ತಿದ್ದಾರೆ ಎಂದು ನುಡಿದರು.

ಬಂಡವಾಳಶಾಹೀ ಜಗತ್ತಿನ ಶೇರು ಮಾರುಕಟ್ಟೆ ಕುಸಿತವನ್ನು ಪ್ರಸ್ತಾಪಿಸುತ್ತಾ ಬಂಡವಾಳಶಾಹಿ ಅರ್ಥ ಶಾಸ್ತ್ರಜ್ಞರು ಹಲವಾರು ಕಾರಣಗಳನ್ನು ಗುರುತಿಸಿದ್ದರೂ ಮೂಲಭೂತ ಅಂಶವೊಂದನ್ನು ಗುರುತಿಸಿಲ್ಲ ಎಂದ ಬಿ.ಟಿ.ಆರ್. ಮುಂದುವರಿದ ಬಂಡವಾಳಶಾಹಿ ದೇಶಗಳ ಸರ್ಕಾರಗಳ ಮೇಲೆ ಗುತ್ತೇದಾರಗಳ ಪ್ರಾಬಲ್ಯವೇ ಆ ಮೂಲಭೂತ ಅಂಶ ಎಂದರು. ಇದಲ್ಲದೆ ಮೂರನೇ ಒಂದು ಭಾಗ ಸಮಾಜವಾದದ ದಾರಿ ಹಿಡಿದು ಸಾಮ್ರಾಜ್ಯಶಾಹಿ ಶೋಷಣೆಯ ಕಕ್ಷೆಯ ಹೊರಗಿರುವುದು, ತೃತೀಯ ಜಗತ್ತಿನ ದೇಶಗಳಲ್ಲೂ ವಸಾಹತುಶಾಹಿಯ ಅಂತ್ಯದಿಂದಾಗಿ ಶೋಷಣೆಗೆ ಉಂಟಾಗಿರುವ ಅಡ್ಡಿ ಆತಂಕಗಳು, ಬಹು ರಾಷ್ಟ್ರೀಯ ಸಂಸ್ಥೆಗಳ ಲಾಭದಾಸೆಯ ಅರಾಜಕ ವ್ಯವಸ್ಥೆ ಮತ್ತು ಬಂಡವಾಳಶಾಹಿ ಅಸಮಾನ ಬೆಳವಣಿಗೆ ಈ ಮಾರುಕಟ್ಟೆ ಬಿಕ್ಕಟ್ಟನ್ನು ತೀವ್ರಗೊಳಿಸಿದೆ. ಸದ್ಯದ ಈ ಮುಗ್ಗಟ್ಟಿನಿಂದ ಹೊರಬರುವುದು ಬಂಡವಾಳಶಾಹಿಗೆ ಸಾಧ್ಯವಾಗಲಿಲ್ಲ.

ಭಾರತದ ಮೇಲೆ ಈ ಬಂಡವಾಳಶಾಹೀ ಮುಗ್ಗಟ್ಟಿನ ಪ್ರಭಾವದ ಕುರಿತು ವಿವರಿಸುತ್ತಾ ಈಗಾಗಲೇ ಜನತೆಯ ಮೇಲೆ ಸಂಕಷ್ಟಗಳ ಹೊರೆ ಹೇರಿರುವ ನಮ್ಮ ದೇಶದ ಆರ್ಥಿಕಪರಿಸ್ಥಿತಿ ಇನ್ನಷ್ಟು ಆಳಕ್ಕೆ ಕುಸಿಯಬಹುದೆಂದರು ಬಿ. ಟಿ. ಆರ್. ರಾಷ್ಟ್ರೀಯ ಉತ್ಪಾದನೆಯ ಅಭಿವೃದ್ಧಿ ದರ ಸೊನ್ನೆಗಿಳಿದು ವಿದೇಶೀ ವಿನಿಮಯ ಕೊರತೆ ಒಂದು ಶತಕೋಟಿ ಡಾಲರ್‌ಗಳಷ್ಟು ಹೆಚ್ಚಬಹುದೆಂದು ವಿಶ್ವಬ್ಯಾಂಕ್ ಅಂದಾಜು ಹೇಳುತ್ತಿದೆ. ಇದರಿಂದಾಗಿ ಭಾರತ ಮತ್ತೆ ಈ ವಿಶ್ವಬ್ಯಾಂಕ್‌ನಿಂದ 30 ಕೋಟಿ ಡಾಲರ್ ಸಾಲಕ್ಕೆ ಕೈಒಡ್ಡಿ. ಅದರ ಶರತ್ತುಗಳನ್ನು ಈಗಾಗಲೇ ರಾಜೀವ್ ಸರ್ಕಾರ ಜ್ಯಾರಿಗೊಳಿಸುತ್ತಿದೆ.

ಜೂನ್ 1986 ರಲ್ಲೇ ರೋಗಗ್ರಸ್ತ ಘಟಕಗಳ ಸಂಖ್ಯೆ 1ಲಕ್ಷ 30ಸಾವಿರ. ಇವುಗಳಿಂದ ಒಟ್ಟು 4.6 ಸಾವಿರ ಕೋಟಿ ರೂ. ಸಾಲ ಬಾಕಿ. ಅತ್ತ 20 ದೊಡ್ಡ ಗುತ್ತೇದಾರಿ ಮನೆತನಗಳ ಆಸ್ತಿ ಮೌಲ್ಯ 1984ರಲ್ಲಿ 18.7% 1985ರಲ್ಲಿ ಮತ್ತೆ 29.3% ಅಂದರೆ ಎರಡು ವರ್ಷಗಳಲ್ಲೇ 50% ದಷ್ಟು ಹೆಚ್ಚಿದೆ, ! ಆದರೆ ಜನತೆಗೆ ನಿರುದ್ಯೋಗ ಕಾರ್ಖಾನೆಗಳ ಮುಚ್ಚುವಿಕೆ, ರಿಟ್ರೆಂಚ್‌ಮೆಂಟ್, ಇದನ್ನು ವಿವರಿಸುತ್ತಾ ವಿಶೇಷವಾಗಿ ಹೊಸ ಜವಳಿ ನೀತಿಯ ದುಷ್ಪರಿಣಾಮಗಳನ್ನು ಬಿ.ಟಿ.ಆರ್. ವಿಶದವಾಗಿ ತಿಳಿಸಿದರು.

ವಿಪರೀತ ಬೆಲೆ ಏರಿಕೆಯ ಬಗ್ಗೆ ಹೇಳುತ್ತಾ ಇದೇ ಸೆಪ್ಟಂಬರ್ ತಿಂಗಳಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದರೆ 10.2./. ಬೆಲೆ ಯೇರಿಕೆಯಾದುದನ್ನು ಅವರು ಪ್ರಸ್ತಾಪಿಸುತ್ತಾ ಇದರಿಂದ ಹೆಚ್ಚಬೇಕಾದ ತುಟ್ಟಿಭತ್ಯೆಯನ್ನು ಕಡಿತ ಮಾಡಲು ಹೊಸ ಸೂಚ್ಯಂಕವನ್ನು ಹೇಳುವ ಪ್ರಯತ್ನ ನಡೆಯುತ್ತಿರುವುದರತ್ತಲೂ ಗಮನ ಸೆಳೆದರು.

ಭಾರತದ ಕಾರ್ಮಿಕವರ್ಗ ಎದುರಿಸುತ್ತಿರುವ ಈ ಬೆಲೆಯೇರಿಕೆ, ಹೆಚ್ಚುತ್ತಿರುವ ನಿರುದ್ಯೋಗ ಮತ್ತು ತುಟ್ಟಿಭತ್ಯೆ ಕಡಿತದ ಯಾತನಾಮಯ ಪರಿಸ್ಥಿತಿಯ ಹಿನ್ನೆಲೆಯನ್ನು ವಿವರಿಸಿದ ಮೇಲೆ ಕಾಂ. ರಣದಿವೆಯವರು ಕಠಿಣ ಪರಿಸ್ಥಿತಿಯಲ್ಲೂ ಕಾರ್ಮಿಕರು ದೃಢನಿರ್ಧಾರದಿಂದ ಹೋರಾಡುತ್ತಿದ್ದಾರೆ ಎಂದರು. ಮುಷ್ಕರಗಳ ಬಗ್ಗೆ ಹೇಳುವಾಗ ದೆಹಲಿಯ ಇಂಡಿಯನ್ ಎಕ್ಸ್‌ಪ್ರೆಸ್ ಕಾರ್ಮಿಕರ ಮುಷ್ಕರವನ್ನು ಪ್ರಸ್ತಾಪಿಸುತ್ತಾ ಪತ್ರಿಕೆಯ ಸಂಪಾದಕರೇ ಮುಷ್ಕರ ಮುರಿಯುವ ಪ್ರಯತ್ನ ನಡೆಸಿದ್ದು ನಾಚಿಕೆಗೇಡು ಎಂದು ನುಡಿದರು.

ಸಾರ್ವಜನಿಕ ವಲಯದ ಉದ್ದಿಮೆಗಳ ಕಾರ್ಮಿಕರು ಮಧ್ಯಂತರ ಪರಿಹಾರಕ್ಕೆ ನಡೆಸಿದ ಯಶಸ್ವಿ ಮುಷ್ಕರ, ಹರ್ಯಾಣಾ ಮತ್ತು ಉತ್ತರ ಪ್ರದೇಶ ಸರ್ಕಾರಿ ನೌಕರರ ಮುಷ್ಕರ, ಅಭೂತಪೂರ್ವ ದೇಶವ್ಯಾಪೀ ಕಾಲೇಜು ಶಿಕ್ಷಕರ ಮುಷ್ಕರ ಹೀಗೆ ರಾಜೀವ್ ಧೋರಣೆಗಳಿಗೆ ಎಲ್ಲಾ ನೌಕರ ಹಾಗೂ ಕಾರ್ಮಿಕ ವಿಭಾಗಗಳಿಂದ ಪ್ರತಿರೋಧ ಬರುತ್ತಿದೆ. ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕ ಉದ್ದಿಮೆಗಳ ಅಧಿಕಾರಿಗಳು ಹೆಚ್ಚಿನ ಜಾಗೃತಿ ತೋರ್ಪಡಿಸಿದ್ದಾರೆ. ಇದು ಟ್ರೇಡ್ ಯೂನಿಯನ್ ಚಳುವಳಿಯಲ್ಲಿನ ಒಂದು ಒಳ್ಳೆಯ ಲಕ್ಷಣ ಎಂದು ಬಿ.ಟಿ.ಆರ್. ಅಭಿಪ್ರಾಯ ಪಟ್ಟರು.

ದೇಶದ ಸಮಗ್ರತೆ ಮತ್ತು ಐಕ್ಯತೆಯ ರಕ್ಷಣೆಗಾಗಿ ಸಿ.ಐ.ಟಿ.ಯು. ಕಾರ್ಯಕರ್ತರು ಗಮನಾರ್ಹ ಪ್ರಯತ್ನಗಳನ್ನು ಪಂಜಾಬ್ ಪಶ್ಚಿಮ ಬಂಗಾಳ, ಅಸ್ಸಾಂ, ತಮಿಳು ನಾಡುಗಳಲ್ಲಿ ನಡೆಸಿರುವುದನ್ನು ಕಾಂ. ರಣದಿವೆ ಅಭಿನಂದಿಸಿ "ನವವಿಮೋಚಿತ ದೇಶವೊಂದರ ಕಾಮಿಕ ವರ್ಗ ಮಾತ್ರವೇ ಒಗಟ್ಟನ್ನಿಲ್ಲಿ ತರುವ ಶಕ್ತಿ. ಸಿ.ಐ.ಟಿ.ಯು.ನ ಕಾರ್ಮಿಕರು ತಮ್ಮ ಹೊಣೆಯನ್ನು ನಿರ್ವಹಿಸಲು ಕಲಿಯಲಾರಂಭಿಸಿದ್ದಾರೆ." ಎಂದು ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು.

ಕೋಮುವಾದಿಗಳು, ವಿಚ್ಛಿದ್ರಕಾರಿಗಳು ಹಾಗೂ ಸಾಮ್ರಾಜ್ಯಶಾಹೀ ಪಿತೂರಿಗಳ ವಿರುದ್ಧ ಹಾಗೂ ರಾಜೀವ ಗಾಂಧಿಯವರ ಜನ-ವಿರೋದಿ ಧೋರಣೆಗಳ ವಿರುದ್ಧ ಹೋರಾಟದಲ್ಲಿ ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರಾದ ಎಡರಂಗ ಸರ್ಕಾರಗಳು ಮುಂದುವರಿದ ಕಾವಲು ಠಾಣೆಗಳಂತಿವೆ. ಇದನ್ನು ಕಾರ್ಮಿಕ ವರ್ಗ ಮನಗಂಡು ಈ ಸರ್ಕಾರಗಳ ವಿರುದ್ಧ ಕಾಂಗ್ರೆಸ್ (ಐ) ಅಪಪ್ರಚಾರಗಳನ್ನು ಎದುರಿಸುವಲ್ಲಿ ಈ ಸರ್ಕಾರಗಳಿಗೆ ಬೆಂಬಲ ನೀಡಬೇಕೆಂದು ಕಾ.ರಣದಿವೆ ಕರೆನೀಡಿದರು. ಬರ ಹಾಗೂ ನೆರೆಪರಿಹಾರದಲ್ಲೂ ಕಾರ್ಮಿಕ ವರ್ಗವೇ ಸ್ವತಃ ಏಕೆ ಮುಂದಾಗಬೇಕು ಎಂಬುದಕ್ಕೆ ಕಾರಣ ನೀಡುತ್ತಾ, ದೇಶದ ರಕ್ಷಣೆಯ ವಿಷಯದಲ್ಲೇ ಭ್ರಷ್ಟಾಚಾರದ ಮಸಿ ಬಳಿಸಿಕೊಂಡಿರುವ ಕೇಂದ್ರ ಸರ್ಕಾರದ ಆಡಳಿತ ಬರ ಪೀಡಿತರಿಗೆ ಪರಿಹಾರ ನೀಡುತ್ತದೆಂದು ನಂಬಲು ಸಾಧ್ಯವಿಲ್ಲ ಎಂದರು.

ಡಿಸೆಂಬರ್ 9ರ ರ್‍ಯಾಲಿ ಬಗ್ಗೆ ಹೇಳುತ್ತಾ ಇದು ಎಲ್ಲಾ ಸಾಮೂಹಿಕ ಸಂಘನೆಗಳನ್ನು ಒಗ್ಗೂಡಿಸುವ, ವಿದ್ಯಾರ್ಥಿಗಳು, ಯುವಕರು, ಮಹಿಳೆಯರು ಕೃಷಿ ಕೂಲಿಕಾರರು, ಕಾರ್ಮಿಕರು ಹೀಗೆ ಎಲ್ಲಾ ಜನ ವಿಭಾಗಗಳನ್ನು ತಕ್ಷಣದ ಬೇಡಿಕೆಗಳಿಗಾಗಿ ಒತ್ತಾಯಿಸಲು ನಡೆಸಿರುವ ಅಭೂತಪೂರ್ವ ಪ್ರಯತ್ನ ಎಂದರು ಬಿ.ಟಿ.ಆರ್. ಕೋಮುವಾದಿ ಶಕ್ತಿಗಳ ವಿರುದ್ಧ ಐಕ್ಯತೆಗಾಗಿ ತಮ್ಮ ಕ್ಷೇತ್ರದೊಳಗೂ ಕಾರ್ಮಿಕ ಸಂಘಗಳು ವಿಶೇಷ ಪ್ರಯತ್ನ ನಡೆಸಬೇಕೆಂದು ಬಿ.ಟಿ.ಆರ್ ಕರೆಯಿತ್ತರು. ಅಂದರೆ ಅಲ್ಪಸಂಖ್ಯಾತ ಕೋಮುಗಳ ದಲಿತ ಜನಾಂಗಗಳ ಕಾರ್ಮಿಕರನ್ನು ಸಂಘಗಳಲ್ಲಿ ವಿಶೇಷವಾಗಿ ಸೇರಿಕೊಳ್ಳಲು ಪ್ರಯತ್ನ, ಅವರ ನಿರ್ದಿಷ್ಟ ಸಮಸ್ಯೆಗಳನ್ನೆತ್ತಿಕೊಂಡು ಹೋರಾಟ, ಆಡಳಿತ ಮಂಡಳಿಗಳ ವಿರುದ್ಧ ಆರ್ಥಿಕ ಬೇಡಿಕೆಗಳಿಗಾಗಿ ಮಾತ್ರವಲ್ಲ, ಊಳಿಗಮಾನ್ಯ ಹಾಗೂ ಕೋಮು ಪಿಡುಗುಗಳ ವಿರುದ್ಧವೂ ಹೋರಾಟ ಮುಂತಾದವುಗಳ ಮೂಲಕ ವಿಶೇಷ ಪ್ರಯತ್ನ ನಡೆಸಬೇಕು ಯಾಕೆಂದರೆ "ಕೋಮುವಾದ ಕಾರ್ಮಿಕರವರ್ಗ ಐಕ್ಯತೆಯನ್ನು ಮುರಿಯುತ್ತಿದ್ದ ತನ್ನ ಐಕ್ಯತೆಯನ್ನ ರಕ್ಷಿಸಿಕೊಳ್ಳದೆ ಕಾರ್ಮಿಕ ವರ್ಗ ದೇಶದ ಐಕ್ಯತೆ ರಕ್ಷಿಸಲಾರದು."

ಕಾಮಿಕ ಆಂದೋಲನ ದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ಬೆಳೆದಿದೆ. ಉಳಿದ ಸಾಮೂಹಿಕ ಸಂಘಟನೆಗಳ ನೆರವು ಪಡೆದು, ವಿಶೇಷತಃ ಮೂರು ಎಡರಂಗ ಸರ್ಕಾರಗಳ ಹಾಗೂ ಎಡಪ್ರಜಾಪ್ರಭುತ್ವ ಶಕ್ತಿಗಳ ಬೆಂಬಲ ಪಡೆದು ರಾಜೀವ್‌ಗಾಂಧಿ ವಿರುದ್ಧ ಚಳುವಳಿಯ ನೇತೃತ್ವವಹಿಸಲು, ಸಾಮ್ರಾಜ್ಯಶಾಹೀ ಪಿತೂರಿಗಳನ್ನೂ ವಿಫಲಗೊಳಿಸಲು ಮತ್ತು ಜನತೆಯ ಒಗ್ಗಟ್ಟು ಒಡೆಯುವ ಪ್ರತಿಗಾಮಿ ಶಕ್ತಿಗಳನ್ನೂ ಸೋಲಿಸುವುದು ಅದಕ್ಕೆ ಸಾಧ್ಯ" ಎಂದು ತಮ್ಮ ಅಧ್ಯಕ್ಷ ಭಾಷಣದ ಕೊನೆಯಲ್ಲಿ ಅವರು ಸ್ಪಷ್ಟವಾಗಿ ಅಭಿಪ್ರಾಯ ಪಟ್ಟರು. ●

# ಕರ್ನಾಟಕ ಸರ್ಕಾರದ ಆರ್ಥಿಕ ದುಸ್ಥಿತಿ

[1ನೇ ಪುಟದಿಂದ]

ಕೊರತೆ ಬಜೆಟ್‌ನಲ್ಲಿ ಸೂಚಿಸಿದುದನ್ನು ಮೀರಿ ಹೆಚ್ಚುತ್ತಿದೆ. ಹೀಗೆಂದರೇನು? ಮುದ್ರಿಸಿ ಈ ಕೊರತೆ ತುಂಬಿಕೊಳ್ಳಲಾಗುತ್ತಿದೆ ಎಂದರ್ಥ. ಕೇಂದ್ರ ಸರ್ಕಾರಕ್ಕೆ ಈ ಕೊರತೆಯನ್ನು ತುಂಬಿಕೊಳ್ಳಲು ಇನ್ನೂ ಎರಡು ಮಾರ್ಗಗಳನ್ನವಲಂಭಿಸಿದೆ ಮೊನ್ನೆ ತಾನೇ ಮಂಡಿಸಲಾದ ಪೂರಕ ಬಜೆಟ್‌ನಲ್ಲಿ ಹೆಚ್ಚುವರಿ ತೆರಿಗೆಗಳು ಹಾಗೂ ವಿಶ್ವಬ್ಯಾಂಕ್‌ನಿಂದ ಬರಪರಿಹಾರಕ್ಕಾಗಿ ಸಾಲ.

ಕೇಂದ್ರಸರಕಾರ ಈ ಕೊರತೆಯನ್ನು ರೂಪಾಯಿಗಳ ಮುದ್ರಣದಿಂದ ವಿಶ್ವಬ್ಯಾಂಕ್ ಸಾಲದಿಂದ ತುಂಬಿಕೊಳ್ಳಲು ಯತ್ನಿಸುವಂತೆ ರಾಜ್ಯ ಸರಕಾರಗಳು ಮಾಡಲಾಗುವುದಿಲ್ಲ.

1985ರ ವರೆಗೆ ರಾಜ್ಯ ಸರಕಾರಗಳು ಇಂತಹ ಕೊರತೆಯನ್ನು ಓವರ್ ಡ್ರಾಫ್ಟ್ ಮೂಲಕ ಎಂದರೆ ರಿಸರ್ವ್ ಬ್ಯಾಂಕ್‌ನಲ್ಲಿ ತಾವು ಇಟ್ಟ ಹಣಕ್ಕಿಂತ ಹೆಚ್ಚು ಹಣ ಪಡೆಯುವುದರ ಮೂಲಕ ತುಂಬಿಕೊಳ್ಳುತ್ತಿದ್ದವು ಆದರೆ ಈಗ ರಾಜ್ಯ ಸರ್ಕಾರಗಳಿಗೆ ಈ ಅನುಕೂಲವನ್ನು ಬಿಲ್‌ಕುಲ್ ತಪ್ಪಿಸಲಾಗಿದೆ. ಈ ಅನುಕೂಲವನ್ನು ತಪ್ಪಿಸುವಾಗ ಅದರ ಜೊತೆಯಲ್ಲಿಯೇ ರಾಜ್ಯ ಸರ್ಕಾರಗಳಿಗೆ ಹೆಚ್ಚಿನ ಸಂಪನ್ಮೂಗಳನ್ನು ನೀಡುವ ಕ್ರಮವನ್ನು ಕೇಂದ್ರ ಸರಕಾರ ಕೈಗೊಳ್ಳಲಿಲ್ಲ. ಇದೇ ಉದ್ದೇಶಕ್ಕಾಗಿ ಸರ್ಕಾರಿಯಾ ಆಯೋಗವನ್ನು ನೇಮಿಸಿ ನಾಲ್ಕು ವರ್ಷಗಳೇ ಕಳೆದರೂ ರಾಜ್ಯ ಸರ್ಕಾರಗಳಿಗೆ ಏನೂ ಲಾಭವಾಗಲಿಲ್ಲ. ಆದುದರಿಂದ ಕೇಂದ್ರ-ರಾಜ್ಯ ಸರ್ಕಾರಗಳ ಅಸಮತೋಲನ ಸಂಬಂಧಗಳಿಂದ ಎಲ್ಲಾ ರಾಜ್ಯಗಳೂ ವಿವಿಧ ಪ್ರಮಾಣದಲ್ಲಿ ಅನುಭವಿಸುತ್ತಿರುವ ಕಷ್ಟ ಈ ಆರ್ಥಿಕ ದುಸ್ಥಿತಿ.

ಇದಕ್ಕೆ ಪ್ರತಿಯಾಗಿ ಜನತಾಸರ್ಕಾರದ ಕಡೆಯಿಂದ ಕೇಂದ್ರ-ರಾಜ್ಯ ಸಂಬಂಧಗಳು ಹೀಗೇ ಮುಂದುವರಿದರೆ ರಾಜ್ಯದಲ್ಲಿ ಪಂಜಾಬ್, ಅಸ್ಸಾಮ್ ರೀತಿಯ ಚಳುವಳಿ ಆರಂಭವಾದೀತು ಎಂಬ ಮಾತೊಂದು ಕಡೆ.

ಹಿಂದೆಂದೂ ಇಲ್ಲದಷ್ಟು ಬೆಲೆಏರಿಕೆಯನ್ನು ಜನತೆ ಎದುರಿಸುತ್ತಿರುವಾಗ ರಾಜ್ಯ ಸರಕಾರೀ ನೌಕರರು ಶೇ 10 ರಷ್ಟು ಸಂಬಳವನ್ನು ಉಳಿತಾಯದಲ್ಲಿ ತೊಡಗಿಸಬೇಕು ಎಂಬ ಒತ್ತಾಯ ಮತ್ತೊಂದು ಕಡೆ.

ಜನತಾ ಪಕ್ಷ ತಾನೂ ಒಂದು ಬಂಡವಾಳಶಾಹಿ ಭೂಮಾಲಕ ಪಕ್ಷವಾಗಿರುವುದರಿಂದ ಕೇಂದ್ರ ಸರಕಾರದ ಆರ್ಥಿಕ ನೀತಿಯ ವಿರುದ್ಧ ಗಟ್ಟಿಯಾದ ಧ್ವನಿಯೆತ್ತಲು ಈ ಬಗ್ಗೆ ಜನತೆಯ ಬಳಿ ಹೋಗಿ ನಮ್ಮ ದೇಶದ ಕೇಂದ್ರಿಕೃತ ವ್ಯವಸ್ಥೆಯ ಬಗ್ಗೆ ಅರಿವು ಮೂಡಿಸಲು ಸಿದ್ಧವಾಗಿಲ್ಲ. ಕಾಂಗ್ರೆಸವರು ಎತ್ತುತ್ತಿರುವ ಪುಂಖಾನುಪುಂಖವಾದ ಅಪಾದನೆಗಳ ಸುರಿಮಳೆಗೆ ಅಂಕಿ ಸಂಖ್ಯೆಗಳಿಗೆ ಉತ್ತರ ನೀಡಿ ಅವರ ಬೆರಳನ್ನು ಅವರಿಗೇ ಚುಚ್ಚುವ ಪ್ರಯತ್ನವಿಲ್ಲ. ನಿಜಸ್ಥಿತಿಯನ್ನು ಜನರ ಮುಂದೆ ಇಟ್ಟರೆ ಮಾತ್ರ ಜನರ ಸಹಕಾರ ದೊರೆಯಲು ಸಾಧ್ಯ.

ಕರ್ನಾಟಕ ಸರಕಾರದ ಈ ಆರ್ಥಿಕ ದುಸ್ಥಿತಿಗೆ ಮೂಲಕಾರಣ ಚಾಲ್ತಿವರ್ಷದಲ್ಲಿ ಸುಮಾರು 145.54ಕೋಟಿ ರೂ.ಗೂ ಹೆಚ್ಚು ಹೊಸ ತೆರಿಗೆಗಳನ್ನು ಹಾಕಿಯೂ ಕೂಡ 147.95 ಕೋಟಿ ರೂ.ಗಳಷ್ಟು ಬಜೆಟ್ ಕೊರತೆ ಉಳಿದಿದ್ದು.

ಹಿಂದಿನ ವರ್ಷಗಳಲ್ಲಿ 35.75 ಕೋಟಿ 5ಕೋಟಿರೂ.ಗಳಷ್ಟೇ ಕೊರತೆಇದ್ದರೆ ಈ ಬಾರಿ ಈ ಕೊರತೆ ಎರಡು ಮೂರು ಪಟ್ಟು ಏರಿದ್ದು ಅದರಜೊತೆಗೆ ತೆರಿಗೆ ಸಂಗ್ರಹದಲ್ಲಿ ಮುಖ್ಯವಾಗಿ ಅಬ್ಕಾರಿ ತೆರಿಗೆ ಸಂಗ್ರಹದಲ್ಲಿ ಆಗಿರುವ ಕೊರತೆ. ಈ ಬಜೆಟ್‌ಕೊರತೆ ಇಷ್ಟೊಂದು ಹೆಚ್ಚಲು ಕಾರಣ ಹಿಂದೆ ರಾಜ್ಯಸರಕಾರ ಪಡೆದಿದ್ದ ಓವರ್ ಡ್ರಾಫ್ಟ್ ಎಲ್ಲವನ್ನೂ ಒಮ್ಮೆಗೆ ಕೇಂದ್ರ ಸರಕಾರ ಸಾಲವೆಂದು ಪರಿಗಣಿಸಿ 5 ವರ್ಷಗಳಲ್ಲಿ ಹಿಂತಿರುಗಿ ಕೊಡಬೇಕೆಂದು ವಿದಿಸಿದ್ದು ಇದರಿಂದ ರಾಜ್ಯದ ಬಜೆಟ್ ಮೇಲೆ ಬಿದ್ದಿರುವ ಹೊರೆ.

ಆದರೆ ಪ ಬಂಗಾಲ ಸರಕಾರ 87-88ರ ಚಾಲ್ತಿ ವರ್ಷದ ಬಜೆಟ್‌ನಲ್ಲಿ ಬಜೆಟ್ ಕೊರತೆಯನ್ನು ತೋರಿಸುವುದನ್ನು ಪೂರ್ಣವಾಗಿ ಕೈಬಿಟ್ಟು ಹೆಚ್ಚಳದ ಬಜೆಟ್ ತೋರಿಸಿದೆ. ಯಾವಾಗ ಕೇಂದ್ರ ಸರಕಾರ ರಿಸರ್ವ್‌ಬ್ಯಾಂಕ್ ಮೂಲಕ ಪಡೆಯಬಹುದಾಗಿದ್ದ ಓವರ್‌ಡ್ರಾಫ್ಟ್ ಅನುಕೂಲವನ್ನು ತಪ್ಪಿಸಿತೋ ಆಗ ಕೊರತೆ ಬಜೆಟ್ ತೋರಿಸುವುದರಿಂದ ರಾಜ್ಯದ ಜನತೆಗೇ ಹಾನಿ' ಮತ್ತಷ್ಟು ತೆರಿಗೆಗಳಿಗೇ ದಾರಿ ಎಂದು ಕಂಡು ಈ ಹೆಚ್ಚಳದ ಬಜೆಟ್ ತೋರಿಸಿದೆ. ಆದರೆ ರಾಜ್ಯಗಳಿಗೆ ಹೆಚ್ಚಿನ ಆರ್ಥಿಕ ಸಂಪನ್ಮೂಲಗಳು ಹಾಗೂ ಅಧಿಕಾರಕ್ಕೆ ನಿರಂತರವಾಗಿ ಹೋರಾಟ ಸಾಗಿಸಿದೆ. ಜನರಿಗೆ ಮನವರಿಕೆ ಮಾಡಿಕೊಟ್ಟಿದೆ.

ಜಿ. ಎನ್. ನಾಗರಾಜ್

---

(5 ನೇ ಪುಟದಿಂದ)

ಕೇಂದ್ರದ ಸಂಘಟನೆ ಹಾಗೂ ಸ್ಥಳೀಯ ಸಂಘಟನೆಗಳ ನಡುವೆ ನಿಕಟ ಸಹಕಾರ ದೂರದರ್ಶನ ಕಾರ್ಯಕ್ರಮಗಳ ಸುಲಲಿತ ಕಾರ್ಯನಿರ್ವಹಣೆಗೆ ದಾರಿ ಮಾಡಿ ಕೊಡುತ್ತದೆ. ಇದರಿಂದ ನಮ್ಮ ದೇಶದ ವಿಶಾಲ ಜನಸಮೂಹಗಳಿಗೆ ಪ್ರಯೋಜನವಾಗುತ್ತದೆ.

ದೂರದರ್ಶನದ ಕಾರ್ಯಕ್ರಮಗಳನ್ನು ರೂಪಿಸುವಾಗ ದೇಶದ ಸಮಗ್ರತೆ ಮತ್ತು ಐಕ್ಯತೆಗೆ ಪ್ರಥಮ ಆದ್ಯತೆ ನೀಡಬೇಕೆಂಬುದನ್ನು ಮತ್ತೊಮ್ಮೆ ಹೇಳಿಕೊಡಬೇಕಾಗುತ್ತದೆ. ದೂರದರ್ಶನ ಕಾರ್ಯಗಳು ದಲಿತ ವಿಭಾಗಗಳು ಹಾಗೂ ಬುಡಕಟ್ಟುಗಳೂ ಸೇರಿದಂತೆ ಎಲ್ಲಾ ಭಾಷಾ ಗುಂಪುಗಳ ಶ್ರೀಮಂತ ಸಂಸ್ಕೃತಿ ಪರಂಪರೆಯನ್ನು ಬಿಂಬಿಸಬೇಕು.

Printed & Published by P. Ramachandra Rao on behalf of the Communist Party of India [Marxist] Karnataka State Committee
K. V. Temple Street, Sultanpet, Bangalore-560053
Sultanpet B-53 Phone · 75331
Editor : Ramachandra Rao
Editorial and Managerial Office : L-56, K. V. Temple Street,
Managing Editor : N. K. Upadhyaya